ಅಪರಂಜಿ

ಆಗಸ್ಟ್

1991

ತಿಳಿನಗೆಯ ಕಾರಂಜಿ



ಪ್ರಕಾಶ್

ಸಿ. ಆರ್. ಸತ್ಯ

ಪಾಟಾಳಿ (ನಾ. ಕಸ್ತೂರಿ)

ಆರತಿ

ಶಿವು

ಒಬ್ಬ ಬಾತ್ಮೀದಾರ


ದೊಡ್ಡ ರಂಗೇಗೌಡ

ಕಂಭಂ ಕೃಷ್ಣಮೂರ್ತಿ

ಶಾಂತಾ ರಘು

ಬಿಡಿ ಪ್ರತಿ: 2 ರೂ. 50 ಪೈ.

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜೆನ್ಸೀಸ್

ಬೆಂಗಳೂರು



ಸಂಪುಟ ೮ ಆಗಸ್ಟ್ ೧೯೯೧ ಸಂಚಿಕೆ ೧೧

ನಮ್ಮ ಪುಟ್ಟ ಪಾರ್ವತಿ ಶಾಲೆಗೆ ಹೊರಟಾಗ ಅವರಮ್ಮ ಅವಳ ಕೈಗೆ ಎರಡು ಇಪ್ಪತ್ತೈದು ಪೈಸೆ ನಾಣ್ಯಗಳನ್ನ ಕೊಟ್ಟು,

"ಪಾರೀ, ಒಂದು ನಾಲ್ಕಾಣೆಗೆ ನೀನು ಸ್ಕೂಲಿನಲ್ಲಿ ಕಡಲೇಕಾಯಿ ತೊಗೋ. ಇನ್ನೊಂದನ್ನ ಸ್ಕೂಲಿಂದ ಬರ್‍ತಾ ಗಣೇಶನ ಗುಡಿ ಹುಂಡಿಲಿ ಹಾಕ್ಬಿಡಮ್ಮಾ" ಅಂತ ಹೇಳಿ ಕಳಿಸಿದಳು.

ಪಾರ್ವತಿ ಶಾಲೆಗೆ ಹೋಗ್ತಾ ದಾರೀಲಿ ಎಡವಿ ಬಿದ್ದಳು. ಜೇಬಿನಲ್ಲಿದ್ದ ಒಂದು ನಾಲ್ಕಾಣೆ ಜಾರಿ ಉರುಳಿಕೊಂಡು ಹೋಗಿ ಚರಂಡೀಲಿ ಬಿದ್ದು ಹೋಯಿತು.

ಪಾರ್ವತಿ "ದೇವರೇ ನಿನ್ನ ನಾಲ್ಕಾಣೆ ಚರಂಡಿ ಕೊನೇಲಿ ಬಿದ್ದಿದೆ. ಅಲ್ಲಿಂದಾನೇ ತಗೊಂಬಿಡಪ್ಪಾ" ಅಂತ ಹೇಳಿ ಶಾಲೆಗೆ ಓಡಿದಳಂತೆ.

ಗೌರವ ಸಲಹೆಗಾರರು : ಶ್ರೀ ಅ. ರಾ. ಸೇ ಶ್ರೀ ಶೇಷಗಿರಿ ಸಂಪಾದಕ : **ಶಿವಕುಮಾರ್**	ಚಂದಾ ವಿವರ : ಬಿಡಿ ಪ್ರತಿ : 2 ರೂ. 50 ಪೈ. ವಾರ್ಷಿಕ ಚಂದಾ : 25 ರೂ. ಆಜೀವ ಚಂದಾ : 250 ರೂ.	ವಿಳಾಸ : ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003 ಕೆಲಸದ ವೇಳೆ : ಬೆಳಗ್ಗೆ 8ರಿಂದ 10 ಗಂಟೆಯ ವರೆಗೆ

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ; 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ಆಗಸ್ಟ್ ೧೯೯೦ ಸಂಚಿಕೆ ೧೧

ಪರಮತಃ ಸೇತೂನ್ಮಾನ ಸಂಬಂಧ ಭೇದ ವ್ಯಪದೇಶೇಭ್ಯಃ

ಬ್ರಹ್ಮಸೂತ್ರ-೩-೨-೭-೩೧


ಆತ್ಮನು ಧರಿಸಿಕೊಂಡಿರುವ ಸೇತು ; ಬ್ರಹ್ಮಕ್ಕೆ ನಾಲ್ಕು ಪಾದಗಳು, ಎಂಟು ಗೊರಸುಗಳು, ಹದಿನಾರು ಕಲೆಗಳು ಎಂದು ಉಪನಿಷತ್ತುಗಳಲ್ಲಿ ಹೇಳಿದೆ. ಆದುದರಿಂದ ಸೇತುವನ್ನು ದಾಟಿ ಬೇರೇನನ್ನೋ ಪಡೆಯುತ್ತಾನೆ. ಎಂಟು, ಹದಿನಾರು ಎಂಬ. ಅಳತೆಯಿರುವುದರಿಂದ ಬ್ರಹ್ಮವಲ್ಲದ್ದು ಬೇರೊಂದಿದೆ ಎಂದು ವಾದಿಗಳು ಹೇಳುತ್ತಾರೆ.

ಕಟ್ಟೆಯು ನೀರನ್ನು ತಡೆದು ನಿಲ್ಲಿಸಿರುವಂತೆ ಬ್ರಹ್ಮವು ಜಗತ್ತನ್ನು ಹಿಡಿದಿದೆ. ನಾಣ್ಯದ ನಾಲ್ಕನೆಯ ಒಂದು ಭಾಗವನ್ನು (ರೂಪಾಯಿ, ಇಪತ್ತೈದು ಪೈಸೆ) ವ್ಯವಹಾರದಲ್ಲಿ ಬಳಸುವಂತೆ ಮಂದ, ಮಧ್ಯಮ ಆಧಿಕಾರಿಗಳಿಗೆ ಬ್ರಹ್ಮದಲ್ಲಿ ಆಸಕ್ತಿಯನ್ನುಂಟುಮಾಡಲು ಅಳತೆಯನ್ನು ಹೇಳಿದೆ. ಬ್ರಹ್ಮವು ತನಗೆರಡನೆಯದಿಲ್ಲದ ಸದ್ವಸ್ತು ಎನ್ನುವುದು ಸಿದ್ಧಾಂತ,

ಮನುಷ್ಯನು ಪ್ರಾರಬ್ಧ ಕರ್ಮವನ್ನು ಅನುಭವಿಸುವುದು ಎಂದಿಗೂ ತಪ್ಪಿದ್ದಲ್ಲ ಎನ್ನುವುದು ಸಿದ್ಧಾಂತ.

ಪ್ರಜಾಪ್ರಭುತ್ವವು ಅತ್ಯಂತ ಶ್ರೇಷ್ಠ ರಾಜಕೀಯ ಪದ್ಧತಿ. ಅದು ದಬ್ಬಾಳಿಕೆ ಶೋಷಣೆಗಳಿಗೆ ಅವಕಾಶ ಕೊಡುವುದಿಲ್ಲ. ಕೊಟ್ಟರೆ ಆಡಳಿತಗಾರರನ್ನು ಬದಲಿಸಬಹುದು. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ, ಪತ್ರಿಕಾ ರಂಗಗಳು ನಾಲ್ಕೂ ಪ್ರಜೆಯ ಶೋಷಣೆಯನ್ನು ತಡೆಯುತ್ತವೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಗಳನ್ನು ಪ್ರಜಾಪ್ರಭುತ್ವವು ನಿಷ್ಕೃಷ್ಟವಾಗಿ ಕೊಡುವುದರಲ್ಲಿ ಸಂಶಯವೇ ಇಲ್ಲ ಎಂಬುದು ಮಂದ, ಮಧ್ಯಮಾಧಿಕಾರಿಗಳಿಗಾಗಿ ಸೃಷ್ಟಿಸಿರುವ ಸಿಹಿ ಲೇಪನದ ಗುಳಿಗೆ ಸೇತುವನ್ನು ದಾಟಿ ಬ್ರಹ್ಮವಲ್ಲದ ಇನ್ನೊಂದನ್ನು ಪಡೆಯುವೆನೆಂಬ ಭ್ರಮಿತ ಸಂತೆ, ಒಂದು ಚುನಾವಣೆ ದಾಟಿದರೂ ಸಿಗುವುದು ಹಳೆಯ ನೇತಾಡುವ ಪಾರ್ಲಿಮೆಂಟೇ.

ಜೈ ಹಿಂದ್



ಪ್ರಕಾಶ್

'ದೇಶಕ್ಕಾಗಿ ಎಲ್ಲರೂ ತ್ಯಾಗಕ್ಕೆ ಸಿದ್ಧರಾಗಿ'.

—ನರಸಿಂಹ ರಾವ್

'ಖಾತೆ ಹಂಚಿಕೆ ; ಸಚಿವರಲ್ಲಿ ಅಸಮಾಧಾನ'

ದಿನಪತ್ರಿಕೆಯ ಶೀರ್ಷಿಕೆಗಳು; ಅಕ್ಕಪಕ್ಕದಲ್ಲಿ !

* * *

ಮನಮೋಹನ್ ಸಿಂಗ್ ನೂತನ ಅರ್ಥ ಮಂತ್ರಿ

— ಸುದ್ದಿ

ಅವರು ಧನ–ಮೋಹನರಾಗುತ್ತಾರೋ ಕಾದು ನೋಡಬೇಕು !

* * *

ನಾವೆಲ್ಲರೂ ಬೆಲ್ಟ್ ಬಿಗಿ ಮಾಡಿ ದೇಶವನ್ನು ಮುಂದೆ ತರಬೇಕು.

— ನರಸಿಂಹ ರಾವ್

ಧೋತಿ ಯಾವಾಗಲೂ ಉಡೋರಿಗೆ ಬೆಲ್ಟ್ ವಿಚಾರ ಏನು ಗೊತ್ತು ?

* * *

ಭಾರತ ಚಿನ್ನ ಅಡವಿಟ್ಟಿತಂತೆ.

— ಪತ್ರಿಕೆ

ಕಸ್ಟಂಸ್‌ನಲ್ಲಿ ಬಂದದ್ದು ಒತ್ತೆಯಲ್ಲಿ ಹೋಯಿತು !

* * *

ಭಾರತದಲ್ಲೇ ಕೃತಕ ಕಣ್ಣಿನ ಲೆನ್ಸ್ ತಯಾರು ಮಾಡುತ್ತಾರಂತೆ.

— ಸುದ್ದಿ

ಅದರಲ್ಲಾದರೂ ದೇಶ ಹಸಿರಾಗಿ ಕಾಣುತ್ತೇನೋ ?

*　　*　　*

ನರಸಿಂಹ ರಾವ್ ಹುಟ್ಟು ಹಬ್ಬ.

— ಪತ್ರಿಕೆ

ಅರ್ಥವಾಯಿತು !

*　　*　　*

ವಾಯು ಮಂಡಲಿ ತೀರ್ಪಿಗೆ ಕರ್ನಾಟಕದಲ್ಲಿ ತೀವ್ರ ಅಸಮಾಧಾನ.

— ಸುದ್ದಿ

ಪರಿಸ್ಥಿತಿ ಕಾವೇರದಿದ್ದರೆ ಸಾಕು.

*　　*　　*

ಬೆಲೆಗಳನ್ನು ಇಳಿಸಲು ನನ್ನ ಬಳಿ ಅಲ್ಲಾಉದ್ದೀನನ ಅದ್ಭುತ ದೀಪ ಇಲ್ಲ.

— ಅರ್ಥ ಮಂತ್ರಿ

ಶ್, ಹಾಗನ್ನಬೇಡಿ, ಒಂದು ಅಲ್ಪ ಸಂಖ್ಯಾತರ ಗುಂಪಿಗೆ ರೇಗಬಹುದು !!

*　　*

ಭಾರತ, ಚಿನ್ನ ಒತ್ತೆ ಇಟ್ಟಿದ್ದಕ್ಕಾಗಿ ಕರ್ನಾಟಕದ ಮುಖ್ಯ ಮಂತ್ರಿಗಳು ಅಸಮಾಧಾನಗೊಂಡರಂತೆ !

*　　*　　*

ನೀರು ಕೊಡಿ ; ಜಯಲಲಿತಾ ಒತ್ತಾಯ.

— ಶೀರ್ಷಿಕೆ

ಹೌದು, ನಾವು ಅವರಿಗೆ ನೀರು ಕುಡಿಸಲೇಬೇಕು !

6

ಒದಿಗೆ ಬೆಲೆ ಇದೆಯೆ ?

ಸೀ. ಆರ್. ಸತ್ಯ

ಮೇಲ್ಕಂಡ ನಿರಾಶಾವಾದಿ ಪ್ರಶ್ನೆ, ಕೆಲಸ ಸಿಕ್ಕದೆ ಅಲೆಯುತ್ತಿರುವ ಅನೇಕ ಪದವೀಧರರ ಮನಸ್ಸಿನಲ್ಲಿ ಆಗಾಗ್ಗೆ ಎದ್ದು ಕಾಡುತ್ತಿದ್ದರೆ ಅದು ಸಹಜವೇ! ನನ್ನ ವಿಷಯವೇ ನೋಡಿ. ಕನ್ನಡ. ಎಂ.ಎ. ಪಾಸ್ ಮಾಡಿ, ಕಂಪ್ಯೂಟರ್ ಕೋರ್ಸ್ ಒಂದಕ್ಕೂ ಮಣ್ಣು ಹೊತ್ತು, ಜೊತೆಗೆ ಹೋಮಿಯೋಪತೀನೂ ಕಲಿತೆ. ಕೆಲಸ ಸಿಗಲಿಲ್ಲ. ಸರಿ ಮ್ಯಾನೇಜ್‌ಮೆಂಟ್ ಸರ್ಟಿಫಿಕೇಟು, ಫಸ್ಟ್ ಏಡ್ ಸರ್ಟಿಫಿಕೇಟು, ಡ್ರೈವಿಂಗ್ ಲೈಸೆನ್ಸ್ ಗಿಟ್ಟಿಸಿದೆ. ಕೆಲಸ ಇಲ್ಲ! ಅನಂತರ "ವೆಜಿಟೇರಿಯನ್ ಕುಕಿಂಗ್" ಹಾಗೂ "ವಾಷಿಂಗ್ ವಿತೌಟ್ ವಾಟರ್" ಅಂತ ಎರಡು ಕೋರ್ಸುಗಳನ್ನ ಮುಗಿಸಿ, ಬೆಂಗಳೂರಿನ ಪಂಚತಾರಾ ಹೋಟೆಲೊಂದರಲ್ಲಿ ನಡೆದ (ಒಂದು ದಿನದ) "ಕಾಬೂಲ್ ದ್ರಾಕ್ಷಿಗೂ ಒಣ ದ್ರಾಕ್ಷಿಗೂ ಇರುವ ನಿಕಟ ಸಂಬಂಧ"ದ ಬಗ್ಗೆ ನಡೆದ ಕೋರ್ಸನ್ನೂ ಮುಗಿಸಿದೆ. ಕೆಲಸ ? ನೋ ಥಾನ್ಸ್ !

ಆದರೆ ನಾನೊಬ್ಬ ಮಹಾ ಆಶಾವಾದಿ. ಮಗರ್‌ವಾಲ್ಸ್ ಟುಟೋರಿಯಲ್ ಅವರ ಜಾಹೀರಾತು ಜ್ಞಾಪಕಕ್ಕೆ ಬಂತು. "ಸ್ವೀಪಿಂಗ್ ಟೆಕ್ನಾಲಜಿ ಕೋರ್ಸ್" ಅಂತ ಹೊಸದಾಗಿ ತೆಗೆದಿದ್ದರು. ಇರಲಿ ನೋಡೋಣ ಅಂತ ಅದನ್ನೂ ಮುಗಿಸಿದೆ. ತಕ್ಷಣ ನನ್ನ ಅದೃಷ್ಟ ಖುಲಾಯಿಸ್ತು, ನೋಡಿ ನಮ್ಮ ಪಕ್ಕದ ತಾಲೂಕಿನ ದೊಡ್ಡ ಸುಂಕೇಹಳ್ಳಿ ಮುನಿಸಿಪಲ್ ಆಸ್ಪತ್ರೇಲಿ ಕರೆ ಬಂತು! ಹೋದೆ! ಗೆದ್ದೆ!! ಬಂದೆ!!! ಕಾರಣ ? ಓದಿಗೆ ಬೆಲೆ ಇದೆ! ಸಾಕ್ಷಿ ? ಅಲ್ಲಿ ನಡೆದ ಇಂಟರ್‌ವ್ಯೂ! ಅಕ್ಷರಶಃ ಕೆಳಗೆ ನಿವೇದಿಸಿದ್ದೀನಿ. ಓದಿ.

ಚೇರ್ಮನ್ನು ನೋಡಪ್ಪಾ, ಸೀನಿಯರ್ ಝಾಡಮಾಲಿ ಅಂದರೆ ಡಾಕ್ಟರ ಆಫೀಸು, ಎಂ.ಎಲ್.ಎ. ರೂಮು, ಹೊರಗಡೆ ಮೆಟ್ಲು ಇವೆಲ್ಲವನ್ನ ದಿನಕ್ಕೆ ನಾಲ್ಕು ಸಲ ಗುಡಿಸಿ, ಸಾರಿಸಿ, ಕನ್ನಡಿ ತರಹ ಇಟ್ಟಿರಬೇಕು. ನಿನ್ನ ಕೈ ನೋಡಿದ್ರೆ ಯಾವತ್ತೂ ಪೊರಕೆ ಹಿಡಿದ ಹಾಗೆ ಕಾಣೋಲ್ಲ. ಹೋಗಲಿ ಬಿಡು. ತೆಂಗಿನ ಪೊರಕೇಗೂ, ಹುಲ್ಲಿನ ಪೊರಕೇಗೂ ಏನು ವ್ಯತ್ಯಾಸ ಹೇಳು.

ನಾನು : (ಸ್ವಗತ) ಮಗರ್‌ವಾಲ್ಸ್ ಸ್ಪೆಶಲ್ ನೋಟ್ಸ್, ಪೇಜ್ 22, ಪ್ಯಾರಾ ಮೂರೂ — (ಜೋರಾಗಿ) ನಮ್ಮ ನಾಡಿನ ತೆಂಗಿನ ಪೊರಕೆಯು ಸರಾಸರಿ ತೂಕ 400 ಗ್ರಾಂಗಳು. ಸರಾಸರಿ ಉದ್ದ 90 ಸೆಂಟಿ ಮೀಟರ್ರು. 120 ಕಡ್ಡಿಗೂ ಕಮ್ಮಿ ಇದ್ದರೆ, ಅದು ಚಿಕ್ಕ ಪೊರಕೆ 120 ರಿಂದ ಮೇಲಕ್ಕೆ ದೊಡ್ಡ ಪೊರಕೆ, ಹುಲ್ಲಿನ ಪೊರಕೆ ವಿಂಗಡಣೆಯೇ ಬೇರೆ.

ಒಬ್ಬ ಕಮಿಟಿ ಮೆಂಬ್ರು ಸಾಕು, ಸಾಕು. ಏನೋ ಕೇಳಿದ್ರೆ ಏನೋ ಹೇಳ್ಬೇಡ. ಇಲ್ಲಿ ನೋಡಯ್ಯ. ನಮ್ಮ ಆಸ್ಪತ್ರೆಗೆ ಇನ್ನೇನು ಮಿನಿಸ್ಟರ್ ಬರ್ತಾರೆ, ಹತ್ತೇ ನಿಮಿಷಗಳಿವೆ ಅಂತ ಇಟ್ಕೋ. ಅಷ್ಟರಲ್ಲಿ ನಮ್ಮ ನರ್ಸಕ್ಕ ಒಂದು ಫಿನೈಲ್ ಬಾಟಲ್‌ನ ಆಫೀಸು ಮುಂದೇನೆ ಒಡೀತಾಳೆ. ಅದೇ ಟೈಮ್‌ಗೆ ನೀನು ನೆಲ ಸಾರಿ ಸೋಕ್ಕೆ ಇಟ್ಕೊಂಡಿರೋ ಬಕೆಟ್ ಒಬ್ಬ ಪೇಶೆಂಟ್ ನೋಡದೇನೇ ಒದೀತಾನೆ. ನೀರೆಲ್ಲಾ ಹರಿಯುತ್ತೆ. ಈ ಗಲಾಟೆಯಲ್ಲಿ ವೈಟಿಂಗ್ ರೂಮಿನಲ್ಲಿಂದ ಎರಡು ಮಕ್ಕಳು ಬಂದು ಅಲ್ಲೇ ಹಾಯಾಗಿ ಮೂತ್ರ ಬಿಡುತ್ತವೆ. ಇದರ ಮಧ್ಯದಲ್ಲೇ ನಮ್ಮ ಹೆಡ್ ಕ್ಲರ್ಕ್ ಅವರ ಫೈಲ್‌ಗಳ ಜತೆ ಅವಸರದಲ್ಲಿ ಹೋಗ್ತಾ ಅಲ್ಲೇ ಜಾರಿ ಬೀಳ್ತಾರೆ—

ಚೇರ್ಮನ್ನು ಅಷ್ಟು ಸಾಕು, ನರಸೋಪ್ಪನೋರೇ. ಹ್ಞು. ಈಗ ಹೇಳಪ್ಪ. ಈ ರಾದ್ಧಾಂತಾನೆಲ್ಲಾ ಮಿನಿಸ್ಟ್ರು ಬರೋದ್ರೊಳಗೆ — ಅಂದ್ರೆ — ಐದು ನಿಮಿಷದಾಗೆ, ಹ್ಯಾಗೆ ಕ್ಲೀನ್ ಮಾಡ್ತಿ ? ಯಾವ ಪೊರಕೆ ಉಪಯೋಗಿಸ್ತಿ ?

ನಾನು (ಸ್ವಗತ) ಮಗರ್‌ವಾಲ್ ಸಪ್ಲಿಮೆಂಟರಿ ನೋಟ್ಸ್, ಪೇಜ್ 10, ಒಂದನೇ ಪ್ಯಾರ—ರಿಸರ್ಚ್ ಪೇಪರ್ 'ಯೂರಿನೆರಿ' ಎಫೆಕ್ಟ್ ಆನ್ ಕೋಕೋನಟ್ ಎಂಡ್ ಇಟ್ಸ್ ಫೈಬರ್ಸ್—ರಿಸರ್ಚ್ ಎಕ್ಸ್‌ಟ್ರಾಕ್ಟ್: ಸೋಕಿಂಗ್ ಎಫೆಕ್ಟ್ ಆನ್ ಓಲ್ಡ್ ಮೆನ್ ಇನ್ ಫಿನೈಲ್ ಲಿಕ್ವಿಡ್—

(ಜೋರಾಗಿ) ಇದೊಂದು ಕಾಂಪ್ಲಿಕೇಟೆಡ್ ಕೇಸು, ಸಾರ್. ಹುಲ್ಲಿನ ಪೊರಕೇಗೂ ಫಿನಾಲ್‌ಗೂ ಕೆಮಿಸ್ಟ್ರಿ ಹೊಂದಾಣಿಕೆ ಇಲ್ಲ. ತೆಂಗಿನ ಕಡ್ಡಿಗೂ ಮಕ್ಕಳ ಮೂತ್ರಕ್ಕೂ ಬಳ್ಳೆ ಸಾಮ್ಯ ಇದೆ. ಆದರೆ ಮೂತ್ರ ತೆಂಗಿನಲ್ಲಿ ಲೀನವಾಗೋಕ್ಕೆ 10 ನಿಮಿಷಗಳಿಗೂ ಜಾಸ್ತಿ ಬೇಕು. ಇದು ತೆಂಗಿನ ಕಡ್ಡಿಯ ಘನದಿಂದ ಗೊತ್ತಾಗುತ್ತೆ. ಅದಲ್ಲದೆ ಈ ಅವಸ್ಥೆಯಲ್ಲಿ ನಿಮ್ಮ ಹೆಡ್‌ಕ್ಲರ್ಕ್ ಬೇರೆ ಬಿದ್ದಿದ್ದಾರೆ ಅಂತ ಅಂದ್ರಿ. ಫಿನೈಲ್, ಮಕ್ಕಳ ಮೂತ್ರ, ನೀರು ಇವು ಮೂರೂ ದ್ರವಗಳು. ಅವುಗಳ ಜಾತಿಯೇ

ಬೇರೆ. ಆದರೆ ನಿಮ್ಮ ಹೆಡ್ ಕ್ಲರ್ಕ್ ಒಂದು ಗಟ್ಟಿ ವಸ್ತು. ಈ ಎರಡು ವೈವಿಧ್ಯಮಯ ವಸ್ತುಗಳನ್ನ ಒಂದೇ ಪೊರಕೆಯಲ್ಲಿ ಗುಡಿಸೋದು ಕಷ್ಟ. ಗುಡಿಸುವವನ ಹಸ್ತದ ಮೇಲೆ (ಅವನು ಸೀನಿಯರ್ ಝಾಡ ಮಾಲಿ ಆಗಿದ್ರೂನೂ) ತಗಲೋ ಫೋರ್ಸ್ 10 ನ್ಯೂಟನ್ ಮೀಟರ್ ಮೇಲೇ ಹೋಗುತ್ತೆ. ಅನೇಕ ದೊಡ್ಡ ವಿಜ್ಞಾನಿಗಳು ಮನುಷ್ಯರನ್ನ ಪೊರಕೆಯಲ್ಲಿ ಗುಡಿಸೋದರ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಆದರೆ ಅದು ಸಾಧ್ಯವಾಗಿಲ್ಲ. ಪ್ರಕೃತಿ ನಿಯಮ ಹಾಗೆ ಬೇಕಾದರೆ ನಿಮ್ಮನೇಲೇ ಪ್ರಯೋಗ ಮಾಡಿ ನೋಡಿ. ನಿಮ್ಮ ಹೆಂಡ್ತೀನ ನೀವು ಪೊರಕೇಲಿ ಹೊಡೀಬಹುದು. ಆದರೆ ಗುಡಿಸೋಕ್ಕೆ ಇಂಪಾಜಿಬಲ್. ಸಾರ್ !

2ನೇ ಕಮಿಟಿ ಮೆಂಬ್ರು : ಅಲ್ಕಣಪ್ಪಾ.... ಡಾಕ್ಟರ್ ಪೊರಕೆಯಪ್ಪಾ.... ನಮ್ಮ ಚೇರ್ಮನ್ ಕೇಳಿದ್ದಕ್ಕೆ ನೀನು ನೇರವಾಗಿ ಉತ್ತರ ಹೇಳ್ತಿಯೋ ಇಲ್ಲಾ–

ನಾನು (ಜೋರಾಗಿ) ಇಗೋ, ಆ ಪಾಯಿಂಟ್‌ಗೇ ಬಂದೇ ಸಾರ್.

(ಸ್ವಗತ) ಮುಗರ್‌ವಾಲ್ ಸಮ್ಮರಿ ನೋಟ್ಸ್.... ಪಬ್ಲಿಕೇಶನ್: ಹಾಸ್ಪಿಟಲ್ ಬೆಡ್: ಯೂಸಸ್ ಎಂಡ್ ಮಿಸ್‌ಯೂಸಸ್, ಪೇಜ್ 12. (ಜೋರಾಗಿ) ಈ ಪರಿಸ್ಥಿತಿಗೆ ನನ್ನ ಉಪಾಯ ಇಷ್ಟೆ, ಸಾರ್. ತಕ್ಷಣ MLA ರೂಮಿಗೇ ನುಗ್ತೀನಿ. ಅಲ್ಲಿ ಮಲಗಿರೋ ಪೇಶಂಟ್‌ನಾ ಕುರ್ಚಿ ಮೇಲೆ ಕುಕ್ತೀನಿ. ಅವನು ಮಲಗಿದ್ದ ಬೆಡ್‌ನ ಎಳ್ಕೊಂಡು ಬಂದು ನಿಮ್ಮ ಆಫೀಸಿನಿಂದ ಮುಂದೆ ಎಸೀತೀನಿ. ನಾನೊಂದು ಕಡೆ. ಇನ್ನೊಂದು ಕಡೆ ನರ್ಸಕ್ಕ. ಇಬ್ಬರೂ ರೊಯ್ಯಂತ ನೆಲದ ಮೇಲೆ ತಳ್ಳಿಕೊಂಡು ಫಿನೈಲ್, ಮಕ್ಕಳ ಮೂತ್ರ, ನೀರು, ಹೆಡ್ ಕ್ಲರ್ಕ್ ಎಲ್ಲರನ್ನೂ ಒಂದೇ ಏಟಿಗೆ ಸಾರಿಸಿಕೊಂಡು ವೈಟಿಂಗ್ ರೂಮ್ ಮೇಲಿಂದ ವರಾಂಡಕ್ಕೆ ಬಂದು, ಆಸ್ಪತ್ರೆ ಹೊರಗೆ ಬಂದು, ಎಲ್ಲರನ್ನೂ ಕಾಂಪೌಂಡಿನಲ್ಲಿ ಕುಕ್ಕಿ ಮತ್ತೆ ಆಸ್ಪತ್ರೇನಾ ಬ್ಯಾಕ್ ಡೋರ್ ಎಂಟ್ರಿ ಮಾಡಿ, MLA ರೂಮಿನಲ್ಲಿ ಬೆಡ್‌ನ ವಾಪಸ್ ಹಾಕಿ (ಒದ್ದೆ ಸೈಡ್ ಕೆಳ ಮುಖ ಮಾಡಿ) ಕುಕ್ಕುರು ಬಡ್ಡಿರೋ ಪೇಶಂಟ್‌ನ ವಾಪಸ್ ಬೆಡ್‌ಗೇ ಎಸೆದು, ನಿಮ್ಮ ಆಫೀಸಿನಲ್ಲಿ ನಾವಿಬ್ಬರೂ ಹಾಜರ್ ! ಆಸ್ಪತ್ರೆ ಕ್ಲೀನಾಗಿ ಪಳಪಳಾ ಅಂತ ಮಿನುಗುತ್ತಿರುತ್ತೆ ! ನರ್ಸಕ್ಕ ವೈಟಿಂಗ್ ರೂಮಿನಲ್ಲಿ ಎರಡನೇ ರೌಂಡ್‌ಗೆ ರೆಡಿ ಆಗ್ತಿರೋ ಆ ಎರಡು ಮಕ್ಕಳನ್ನ ಟೆಂಪರರಿಯಾಗಿ ಬಾತ್ ರೂಮಿನಲ್ಲಿ ಲಾಕ್ ಮಾಡೋಕ್ಕೆ ಹೇಳಿ ನಾನು ನಿಮ್ಮ ಆಫೀಸಿನಲ್ಲಿ ಊದಿನ ಕಡ್ಡಿ ಹಚ್ತೀನಿ, ಸಾರ್.

ಆಮೇಲೆ ನಿಮ್ಮ ಹೆಡ್ ಕ್ಲರ್ಕ್ ಕೂತಿದ್ದ ಜಾಗದಲ್ಲಿ ಹೋಗಿ ಕೂತ್ಕೊಂಡು ಸ್ವಾಗತದ ನಗೆ ಬೀರ್ತೀನಿ. ಈಗ ನಿಮ್ಮ ಆಸ್ಪತ್ರೆ ಮಿನಿಸ್ಟರ ಆಗಮನಕ್ಕೆ ರೆಡಿ !.

ಚೇರ್ಮನ್ನು : ಶಭಾಷ್, ಚೆನ್ನಾಗಿ ಹೇಳ್ದೆ ! ಚೆನ್ನಾಗಿ ಹೇಳ್ದೆ ! ನೀನು ಪೊರಕೆಯಲ್ಲಿ ಮನುಷ್ಯರನ್ನ ಹೊಡೆಯೋ ವಿಷಯ ಪ್ರಸ್ತಾಪಿಸಿದಾಗ ಇದೊಂದು ಜ್ಞಾಪಕಕ್ಕೆ ಬಂತು ನೋಡು. ಸಗಣಿ ಸಾರಿಸೋ ಪೊರಕೇಗೂ, ಕಸ ಗುಡಿಸೋ ಪೊರಕೇಗೂ ಏನಪ್ಪಾ ಸಂಬಂಧ ?

ನಾನು : (ಜೋರಾಗಿ) ಒಳ್ಳೇ ಕ್ಲಾಸಿಕಲ್ ಪ್ರಶ್ನೆ ಇದು ಸಾರ್ !
(ಸ್ವಗತ) ಮಗರ್‌ವಾಲ್ಸ್ ಈಸಿ ಗೈಡ್ ಟು ಸೆಮಿಸಾಲಿಡ್ ಸ್ವೀಪಿಂಗ್, 1990. (ಜೋರಾಗಿ) ವ್ಯತ್ಯಾಸ ಬರೋದು ಯಾತ್ರಲ್ಲಿ, ಗೊತ್ತೆ ಸಾರ್ ? ಸರ್ಫೇಸ್ ಟೆಂಶನ್‌ನಲ್ಲಿ. ಅಂದರೆ –

ಎರಡನೇ ಕಮಿಟಿ ಮೆಂಬ್ರು (ಚೇರ್ಮನ್‌ಗೆ) : ಅತ್ಲಾಗೆ ಇವನಿಗೆ ಈ ಕೆಲಸ ಕೊಟ್ಟು ರೂಮಿಂದ ಹೊರಗೆ ದಬ್ಬಿ ಸಾರ್. ನನಗೂ ಇವತ್ತು ಕೆಲಸ ಐತೆ, ಬಾವೀಗೆ ಕಟ್ಟೆ ಕಟ್ಟೋಕೆ ಕೆಲಸದವರನ್ನ ಕರ್‍ಸೀದೀನಿ.

ಮೊದಲನೇ ಮೆಂಬ್ರು : ಕಂಟ್ರಾಕ್ಟ್ರು ಹೇಳೋದು ನಿಜ, ಸಾರ್. ಇವನಿಗೆ ಕೆಲಸ ಕೊಡ್ತು; ಅಂದರೆ ಮಾತು ಕಮ್ಮಿ ಮಾಡ್ತಾನೆ. ಕೆಲಸಾನೂ ನಡೆಯುತ್ತೆ. ನಮ್ಮ ಆಸ್ಪತ್ರೇನೂ ಕ್ಲೀನಾಗಿರುತ್ತೆ, ಬಿಡಿ.

ಚೇರ್ಮನ್ನು : ಹಂಗಾರೆ ಸರಿ ಕಣ್ರಪ್ಪ. ನೋಡಿದ್ಯೇನಯ್ಯಾ ? ಇವರಿಬ್ಬರೂ ನಿನ್ನನ್ನ ಹ್ಯಾಗೆ ಶಿಫಾರಸು ಮಾಡ್ತಿದಾರೆ ಅಂತ. ಅದರ ಜೊತೆಗೆ ನಂದೂ ಒಂದು ಶಿಫಾರಸಿ ಸೇರಿಸ್ತೀನಿ ತೊಗೋ. ಎರಡು ಇಂಕ್ರಿಮೆಂಟೂ ಸೇರಿ, ಈ ಕೆಲಸಾ ನಿಂದೇನೆ! ಮುಂದಿನ ತಿಂಗಳು ಒಂದನೇ ತಾರೀಖು ರಿಪೋರ್ಟ್ ಮಾಡಿಕೋ. ಒಳ್ಳೇ ಚುರುಕು ಹುಡುಗಾ ನೀನು. ಕೈಯಲ್ಲಿ ಪೊರಕೆ ಹಿಡಿಯದಿದ್ದರೂ, ಪೊರಕೆ ವಿಷಯ ಎಷ್ಟು ತಿಳ್ಕೊಂಡಿದಿ! ಅದೇ ನನ್ನ ಹೆಂಡ್ತೀನ ನೋಡು. ಅವಳ ಕೈಲಿ ನನ್ನ ಜುಟ್ಟನ್ನ ಮೂವತ್ತು ವರ್ಷಗಳಿಂದ ಹಿಡ್ಕೊಂಡಿದ್ರೂ ಇನ್ನೂ ನನ್ನನ್ನ ಅರ್ಥ ಮಾಡ್ಕೊಂಡೇ ಇಲ್ಲ ನೋಡಪ್ಪ. ಹಿಂಗೇ ಪ್ರಪಂಚ. ಓದಿದವನು ಬಾಳಿಯಾನು !

ನಾನು : (ಜೋರಾಗಿ) ಥ್ಯಾಂಕ್ಯೂ ಸಾರ್ !
(ಸ್ವಗತ) ಥ್ಯಾಂಕ್ಯೂ ಮಿ. ಮಗರ್‌ವಾಲ್, B.A., B.Sc., B.Ed., M.Sc., L.M.P., D.Sc., S.T.C. (Lucknow). ಡೈರೆಕ್ಟರ್, ಮಗರ್‌ವಾಲ್ ಟುಟೋರಿಯಲ್ಸ್, ಡೆಲ್ಲಿ. ಬ್ರಾಂಚಸ್ : ಬಾಂಬೆ, ಕಲಕತ್ತಾ, ಕೊಚ್ಚಿ, ಬೆಂಗಳೂರು.



ಕೊರವಂಜಿಯಿಂದ ....

ಹೇಗಾದರೂ ಸರಿ

ಪಾಟಾಳಿ (ನಾ. ಕಸ್ತೂರಿ)

ಕೆಲ ದಿನಗಳಿಂದ ನನಗೆ ತೀರ ಪರಿಚಿತವಾಗಿದ್ದ ಒಬ್ಬ ಹುಡುಗನನ್ನು ಹತ್ತಿರ ಕರೆದು ಮೊನ್ನೆ ನಾನು, "ಅಯ್ಯಾ ! ಈ ಕಾರ್ಡನ್ನು ಕೊಂಚ ಆ ಮೂಲೆ ಕಂಭದಲ್ಲಿರುವ ಟಪಾಲ್ ಡಬ್ಬದೊಳಕ್ಕೆ ಹಾಕಿ ಬರುತ್ತೀಯಾ ?" ಎಂದು ಕೇಳಿದೆ. ಬಲಗಾಲ ಮಂಡಿ ಉಳುಕಿತ್ತು; ಆದ್ದರಿಂದಲೇ, ಆತನೆದುರು ಹಲ್ಲು ಕಿರಿಯುವ ಶೋಚನೀಯ ಪರಿಸ್ಥಿತಿ ಒದಗಿದ್ದು ! ಏಕೊ ಏನೊ, ಹುಡುಗ ಸುಮ್ಮನಿದ್ದ. ಏಕೊ ಏನು ? ಪರೋಪಕಾರದಲ್ಲಿ ಆಸಕ್ತಿಯಿರಲಿಲ್ಲ, ಅದಕ್ಕೇ ! ಆಗ ನಾನು ಮತ್ತೊಂದು ವರಸೆ ತೆಗೆದೆ. "ನೋಡಪ್ಪ ! ನೀನು ಹೋಗದೆ ಇದ್ದರೆ, ನಾನೇ ಕುಂಟುತ್ತಾ ಹೋಗಬೇಕಾಗುತ್ತದೆ" ಎಂದೆ, ಕನಿಕರ ಹುಟ್ಟಿಸುವ ದನಿಯಲ್ಲಿ. ಆಗ ಆ ಹುಡುಗ ಏನಂದ ಗೊತ್ತೆ? ಚೆನ್ನಾಗಿ ಗಮನಿಸಿ, "ಹೇಗಾದರೂ ಸರಿ" ಇಷ್ಟೇ ಅವನು ಹೇಳಿದ್ದು, ಕುಳಿತಲ್ಲಿಂದ ಏಳದೆ.... "ಹೇಗಾದರೂ ಸರಿ."

ಆಶ್ಚರ್ಯ, ದುಃಖ, ನಿರಾಶೆ, ಭಾವಿ ಭಾರತದ ಪರಿಸ್ಥಿತಿಗಾಗಿ ಪರಿತಾಪ, ಮುಂದಿನ ಪೀಳಿಗೆಯ ಮೇಲೆ ಕೋಪ, ನನ್ನ ಸ್ವಂತ ಮಂಡಿಯ ಮೇಲೆ ಆಕ್ರೋಶ, ಎಲ್ಲವೂ ಒಟ್ಟಾಗಿ ನನ್ನನ್ನು ಕಾಡಿಸಿದುವು. ಹನ್ನೆರಡು ಹದಿನೈದು ವರ್ಷದ ಹೈಕಳೆಲ್ಲ ಇಂಥ ಕಲ್ಲುಗುಂಡುಗಳಾದರೆ, ಮೂರನೆಯ ಪಂಚವಾರ್ಷಿಕ ಯೋಜನೆಗೆ ಮೂರು ನಾಮವೇ ಗತಿ, ಎಂದೆನಿಸಿತು ನನಗೆ. ಆ ಎಣಿಕೆಯಿಂದ ಒಂದು ತೊಟ್ಟು ಕಂಬನಿಯೂ ಕೂಡಿಬಂತು, ಕಣ್ಣ ಅಂಚಿನಲಿ. ಆ ಹುಡುಗನಿಗೂ ನನ್ನಷ್ಟು ಆಯುಸ್ಸು ದಯ ಪಾಲಿಸು, ಅವನ ಮಂಡಿಯೂ ಉಳುಕಲಿ, ಅವನ ಮೊಮ್ಮಗ ಅವನಿಗೂ ಹೀಗೆ "ಹೇಗಾದರೂ ಸರಿ" ಎನ್ನಲಿ, ಎಂದು ಒಳಗೊಳಗೇ ಶಪಿಸಿದೆ.

ಟಪಾಲ್ ಡಬ್ಬವನ್ನು ಸಮೀಪಿಸುತ್ತ ಸಮೀಪಿಸುತ್ತ, ನನ್ನ ಕೋಪ ಆರಿತು. ಆಶ್ಚರ್ಯ ತಣ್ಣಗಾಯಿತು ! ದುಃಖ ಕರಗಿತು ; ಬಿಸಿ ಉಸಿರು ಮಂಗಮಾಯ. ಹುಡುಗ ನಿಜಕ್ಕೂ ಜಾಣ, ಬುದ್ಧಿವಂತ, ಚೆರಿಕೆ, ಬದುಕುವ ದಾರಿ ತಿಳಿದವ, ರಾಜ

ಕಾರಣ ಎಂಬಿವೇ ಮುಂತಾದ ವಿಚಾರ ತರಂಗಗಳು ನನ್ನ ತಲೆಯೊಳಗೆ ತೂರಿ ಬಂದುವು.

"ಹೇಗಾದರೂ ಸರಿ"—ಎಂಬ ತತ್ವ ಅನುಸರಿಸಿದರೆ, ಆಲೋಚನೆಯು, ವಾದ ಪ್ರತಿವಾದದ, ವಿಚಾರ ಮಥನದ ಗೊಡವೆಯೇ ಬೇಕಿಲ್ಲ. ರಾಮನಾದರೂ ಸರಿ, ರಾವಣನಾದರೂ ಸರಿ, ಬೀಸುವುದಕ್ಕೊಂದಿಷ್ಟು ರಾಗಿ ಸಿಕ್ಕರಾಯಿತು, ತಾಳಿದವ ಬಾಳಿಯಾನು, ಹೆಮ್ಮರ ಬಿದ್ದರೂ ಹಂಚಿಕಡ್ಡಿ ಉಳಿಯುತ್ತದೆ, ಆದ್ದರಿಂದ, ಹೊಂದಿ ಬಾಳುವುದೇ ಮುಂದಿಯ ಕರ್ತವ್ಯ, ಹಾಗೂ ಸರಿ, ಹೀಗೂ ಸರಿ, ಹೇಗಾದರೂ ಸರಿ, ತಪ್ಪೆಂಬುದೇ ಇಲ್ಲ ತಬ್ಬಲಿಗಳ ಬಾಯಲ್ಲಿ, ಅದೂ ನ್ಯಾಯ ಇದೂ ನ್ಯಾಯ, ಹಾಗೂ ಹೇಳಬಹುದು ಹೀಗೂ ಹೇಳುವುದುಂಟು, ಹರವಾಡಿದರೆ ಮಾರಿ ನುಂಗಿಬಿಡುವಳು —ಇತ್ಯಾದಿ ಆಪ್ತ ವಾಕ್ಯಗಳನ್ನನುಸರಿಸಿ ಬಾಳಲು ಆ ಹುಡುಗ ಅರ್ಹತೆ ಪಡೆದಿದಾನೆ ಎಂದೆನಿಸಿತು. ಸಕಲ ಪ್ರಾಣಿಗಳೂ ಈ "ಹೇಗಾದೂ ಸರಿ" ತತ್ವವನ್ನೇ ಜೀವನ ಧ್ಯೇಯವಾಗಿ ಹಿಡಿದಿವೆ; "ಹೀಗೆಯೇ ಸರಿ" ಎಂದು ಮೊಂಡು ಹಿಡಿದ ಹಲವು, ಜಗತ್ತಿನಲ್ಲೇ ನಿರ್ನಾಮ!

"ಹೇಗಾದರೂ ಸರಿ" ಎಂದು ಹೇಳುತ್ತ, "ಬಂದದ್ದೆಲ್ಲ ಬರಲಿ" ಎಂಬ ಭಾವನೆಯಿಂದ, ಜಪ್ಪಯ್ಯ ಎಂದು ಕೂರುವ ಇಂಥ ಹುಡುಗರಿಂದಲೇ ನಮ್ಮ ದೇಶ, ಈ ಪ್ರಜಾಸತ್ತಾತ್ಮಕ ಯುಗದಲ್ಲಿ, ಉಳಿಯುತ್ತದೆ. ನಾಳೆ, ಈ ಹುಡುಗ ದೊಡ್ಡವ ನಾಗುತ್ತಾನೆ; ಭಾರಿ ಗುಮಾಸ್ತನಾಗುತ್ತಾನೆ; ಎಂಟು ಮಕ್ಕಳ ತಂದೆ ಎನಿಸಿ ಸೊಸೈಟಿ ಸಾಲಕ್ಕೆ ಕಂತು ಕಟ್ಟುತ್ತಿರುತ್ತಾನೆ—ಗಾಂಧೀ ಮೈದಾನದಲ್ಲಿ, ಒಬ್ಬ ಬಂದು ಒಂದು ದಿನ, ಮುಷ್ಟಿ ಬಿಗಿದು. ಭಾಷಣ ಮಾಡುತ್ತಾನೆ; ಮಾರನೆಯ ದಿನ ಮತ್ತೊಬ್ಬ ಬಂದು ಮುಷ್ಟಿ ಸಡಿಲಿಸಿ ಭಾಷಣ ಮಾಡುತ್ತಾನೆ. ಅಲ್ಲಾಡುವುದಿಲ್ಲ ಈತ! ಅದೂ ಸರಿ, ಇದೂ ಸರಿ, ಎನ್ನುತ್ತಾನೆ. ಅದು ತಪ್ಪು, ಇದೇ ಸರಿ, ಎಂದು ವಾದಿಸಿ, ಆ ಜಗಳಗಂಟಿಗರ ಗುಂಪಿಗೆ ಆತ ಸೇರುವುದೇ ಇಲ್ಲ—ಇಂಥ ಹುಡುಗರು ಒಂದು ಹತ್ತು ಕೋಟಿ ಭಾರತದಲ್ಲಿ ಉತ್ಪತ್ತಿಯಾದರೆ, ದೇಶವೇ ತಣ್ಣ ಗಾಗಿ, ಬಾಳು ತಂಪಾಗುವುದರಲ್ಲಿ ಸಂದೇಹವೇನು? ಏಕೆ ಭಾರತದ ವಿದೇಶಾಂಗ ನೀತಿಯ ಧೋರಣೆಯೇ ಈ ಹುಡುಗನ ಹೇಳಿಕೆಯೇ ಅಲ್ಲವೆ? ಅದೂ ಸರಿ, ಇದೂ ತಪ್ಪಿಲ್ಲ, ಇದರಲ್ಲೂ ದೋಷಗಳಿಲ್ಲವೆಂದಲ್ಲ. ಅದರಲ್ಲೂ ಬೇಕಾದಷ್ಟು ಗುಣಗಳಿವೆ, ಹೇಗಾದರೂ ಸರಿ, ಎಂದಲ್ಲವೆ ನಾವು ಕಾಲ ಕಳೆಯುತ್ತಾ ಇರುವುದು?

ವಿದೇಶಾಂಗ ನೀತಿ ಏನು? ವಿಜ್ಞಾನಾಂಗ ನೀತಿಯೇ ಅದು. ಭೌತ ಶಾಸ್ತ್ರಜ್ಞರನ್ನು ಕೇಳಿ. "ಸೂರ್ಯ ಭೂಮಿಯನ್ನು ಸುತ್ತುತ್ತಿದಾನೆ ಎಂದರೂ ಒಂದೇ, ಭೂಮಿ ಸೂರ್ಯನ ಸುತ್ತ ತಿರುಗುತ್ತದೆ, ಎಂದರೂ ಒಂದೇ, ಲೆಕ್ಕಾ

ಚಾರಕ್ಕೆ" ಎನ್ನುತ್ತಾರೆ. ಕಲ್ಲು ಕೆಳಕ್ಕೆ ಬೀಳುತ್ತದೆ. ಎಂದರೂ ಸರಿಯೆ! ಭೂಮಿ ಕಲ್ಲಿನ ಕಡೆಗೆ ಏಳುತ್ತದೆ. ಎಂದರೂ ಸರಿಯೆ. ಅಂತೆ!.... ಹೇಗಿದೆ ಹೇಳಿಕೆ ?

ಏಕೆ, ಪ್ರಜಾಪ್ರಭುತ್ವ ಎಂದರೂ ಸರಿ. ಅಯೂಬ್ ಪ್ರಭುತ್ವ ಎಂದರೂ ಸರಿ, ಪೋರ್ಚುಗಲ್ ಆಡಳಿತ ಎಂದರೂ ಸರಿ, ಹೇಗಾದರೂ ಸರಿ, ನಮ್ಮ ಕಡೆಯುವ ರಾದರೆ ಸಾಕು, ಎಂದು ಘೋಷಿಸುತ್ತಿಲ್ಲವೆ, ಜನ ಈಗ ? ಸಾಲ ಅಂದರೂ ಒಂದೇ ದಾನ ಅಂದರೂ ಒಂದೇ, ಹಣ ಬರುವುದು ಮುಖ್ಯ, ಎಂದು ಹೇಳುತ್ತಿಲ್ಲವೆ ಆರ್ಥಿಕ ಮಂತ್ರಿಗಳನೇಕರು ?

ಇಂಗ್ಲೀಷಾದರೂ ಸರಿ, ಕನ್ನಡವಾದರೂ ಸರಿ, ಕವಿತೆ ಬರೆದರೆ ಅರ್ಥವಾಗ ಬಾರದು ಅನರ್ಥವಾಗಬೇಕು, ಅದು ಮುಖ್ಯ, ಎಂದು ಸಾಧಿಸುತ್ತ ಇಲ್ಲವೆ, ಸಾಹಿತ್ಯ ಕ್ಷೇತ್ರದ ಹಲವು ದಿಗ್ದಂತಿಗಳು ? ಇದೇ ಚಾಳಿ ಚಿತ್ರಕಲೆಗೂ ಚಲನಚಿತ್ರ ಕಲೆಗೂ ಹರಡಿಲ್ಲವೆ ? ನೂರು ಜನ ನೂರೆಂಟು ಹೇಳಲಿ, ಮೊಳೆ ಹೊಡೆದು ತಗುಲಿಸಿದರಾ ಯಿತು ಎನ್ನುತ್ತಾರೆ ಚಿತ್ರ ಕೊಲಾವಿದರು! ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಿವಿಗೆ ಮೊಸರು ಒಂದು ಕಿವಿಗೆ ಕೆಸರು ತುಂಬಿ, ಹೇಗಾದರೂ ಸರಿ, ಕಾಂಪ್ಲಿಮೆಂಟರಿ ಕೇಳದಿದ್ದರೆ ಸಾಕು, ಎಂದು ಸಿನಿಮಾದವರು ಹೇಳುತ್ತಿಲ್ಲವೆ ?

ನಿಜವಾಗಿ ನೋಡಿದರೆ, ಹೇಗಾದರೂ ತಪ್ಪು ಎಂದು ಹೇಳುವುದಕ್ಕಿಂತ ಹೇಗಾ ದರೂ ಸರಿ ಎಂದು ಸಾಧಿಸುವುದೇ ವೇದಾಂತದ ಒಳಗುಟ್ಟು! ಭಗವಂತನನ್ನು ಬಿಳಿ ಎಂದರೂ ಸರಿ. ಕಪ್ಪೆಂದರೂ ಸರಿ! ಸಹಸ್ರ ಶೀರ್ಷಾ ಎಂದರೂ ಸರಿ, ಐದು ತಲೆಯ ವನು ಎಂದರೂ ಸರಿ, ತಲೆಯೇ ಇಲ್ಲದವನು ಎಂದರೂ ಸರಿ! ಎಲ್ಲ ಮಾತುಗಳೂ ಅವನಿಗನ್ವಯ! ಒಂದೂ ಮಾತೂ ಅವನನ್ನು ಮುಟ್ಟದು! ಹುಡುಗ ನಿಜಕ್ಕೂ, ತತ್ವದ ತಳವನ್ನು ಕಂಡವ!

ಹೀಗೆ ಅವನನ್ನ ಮೆಚ್ಚಿ, ಅವನಿಗಾಗಿ ಅರ್ಧಾಣೆಗೆ ಕಡಲೆಕಾಯನ್ನು ಕೊಂಡೆ ಟಪಾಲ್ ಡಬ್ಬದ ಕೆಳಗೆ ಕುಳಿತಿದ್ದ ಮುದುಕಿಯಿಂದ.

"ಲೋ! ಸುಲಿದು ಕೊಡಲೋ, ಹಾಗೆಯೇ ಕೊಡಲೊ ?" ಎಂದರೆ, ಹುಡುಗ ಅದಕ್ಕೂ, "ಹೇಗಾದರೂ ಸರಿ" ಅನ್ನೋಣವೆ ? ಸುಲಿದೇ ಕೊಟ್ಟೆ, ನನ್ನ ಹಣೇ ಬರಹ!


ರೂಪಾಯಿ ಅಪಮೌಲ್ಯ!
ಬಡ ರುಪಾಯಿ
ಡಾಲರ್

ಯಾರು, ಯಾರಿಗೆ
ಯಾವ ಸಂಧರ್ಭದಲ್ಲಿ ಹೇಳಿದರು?

ಆರತಿ

---

೧. **"ಇವರಿಬ್ಬರಿಗೂ ಗದಾಯುದ್ಧ ನಡೆಯುವುದರಲ್ಲಿದೆ ಎಂದು ಕೇಳಿ ಇಲ್ಲಿಗೇ ನೇರವಾಗಿ ಬಂದೆ".**

ಅ] ರಾಮಕೃಷ್ಣ ಹೆಗ್ಗಡೆ– ಜನತಾದಳ ಸಭೆಯಲ್ಲಿ, ವಿ. ಪಿ. ಸಿಂಗ್ ಮತ್ತು ಅಜಿತ್ ಸಿಂಗ್ ಕುರಿತು

ಆ] ಕೇಂದ್ರ ನೀರಾವರಿ ಮಂತ್ರಿ– ಕರ್ನಾಟಕ-ತಮಿಳು ನಾಡು ಶೃಂಗ ಸಭೆಯಲ್ಲಿ ಬಂಗಾರಪ್ಪ ಜಯಲಲಿತ ಕುರಿತು

ಇ] ಬಲರಾಮ– ಭೀಮ ದುರ್ಯೋಧನರನ್ನು ಕುರಿತು.

೨. **"ಅವನು ಈ ಪ್ರಾಂತವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆ. ನಾವು ಅವನಿಗೆ ನಿತ್ಯವೂ ಒಂದು ಗಾಡಿ ಅನ್ನವನ್ನು ಕಳುಹಿಸಬೇಕು".**

ಅ] ಕೈಗಾರಿಕೋದ್ಯಮಿಗಳು– ವಾಣಿಜ್ಯ ತೆರಿಗೆ ಅಧಿಕಾರಿಯ ಬಗ್ಗೆ

ಆ] ಕಾರ್ಮಿಕರು– ತಮ್ಮ ಕಾರ್ಮಿಕ ನಾಯಕನ ಬಗ್ಗೆ

ಇ] ಬ್ರಾಹ್ಮಣ– ಬಕಾಸುರನ ಬಗ್ಗೆ

೩. **ಖಂಡವಿದೆಕೋ, ಮಾಂಸವಿದೆಕೋ**
ಗುಂಡಿಗೆಯ ಬಿಸಿ ರಕ್ತವಿದೆಕೋ"

ಅ] ತೆರಿಗೆದಾರರು– ಮನಮೋಹನ ಸಿಂಗ್‌ಗೆ ಬಜೆಟ್ ಅನಂತರ

ಆ] ಪಂಜಾಬಿನ ನಾಗರಿಕರು -ಖಲಿಸ್ತಾನಿ ಆತಂಕವಾದಿಗಳಿಗೆ

ಇ] ಗೋವು– ಹುಲಿಗೆ

೪. **"ನಿಮ್ಮ ನೆನಪೇ ನನ್ನ ಹಿಂಡುವುದು ಹಗಲಿನಲಿ**
ಇರುಳಿನಲಿ ಕಾಣುವುದು ನಿಮ್ಮ ಕನಸು"

ಅ] ಶಿವರಸನ್ ಉರುಫ್ ರಘುವರನ್ – ಪಿರಭಾಕರನ್‌ಗೆ ವೈರ್‌ಲೆಸ್ ಮುಖಾಂತರ

ಆ] ಓಂ ಪ್ರಕಾಶ್ ಚೌಟಾಲಾ– ಡಿಸ್ನೇ ಲ್ಯಾಂಡ್ ಕಾಂಟ್ರ್ಯಾಕ್ಟುದಾರರಿಗೆ

ಇ] ಕೆ. ಎಸ್. ನ್ಸರವರ ಪ್ರಣಯ ಗೀತೆಯಲ್ಲಿ

೩. "ನನ್ನ ಮಾತು ರಾಮ ಬಾಣ
ಬಿಡುವೆನಿದೋ ಮಹಾತ್ರಾಣ"

ಅ] ಎಲ್. ಕೆ. ಅಡ್ವಾನಿ–ಲೋಕ ಸಭೆಯಲ್ಲಿ

ಆ] ಜಯಲಲಿತಾ– ಎಲ್. ಟಿ. ಟಿ. ಇ. ಉಗ್ರವಾದಿಗಳನ್ನು ಕುರಿತು

ಇ] ಕೆ. ಎಸ್.ನ ರವರು ಶಾರದೆಯ ಬಗ್ಗೆ

೬. "ಕೇಳುವುದೇ ಆ ಕೂಗು–ಕಾಣುವುದೇ ಆ ಜ್ವಾಲೆ?"

ಅ] ಮನೆ ಹೆಂಡತಿ–ಅಡುಗೆ ಮಾಡುತ್ತಿರುವ ಗಂಡನನ್ನು ಕುರಿತು– ಪ್ರೆಷರ್ ಕುಕ್ಕರ್ ಹಾಗೂ ಗ್ಯಾಸ್ ಸ್ಟೋವ್‌ಗಳ ಬಗ್ಗೆ

ಆ] ಬೆಲ್ಚಿ–ತರಹದ ಅಮಾನುಷ ಹತ್ಯಾಕಾಂಡದ ಬಗ್ಗೆ ಪತ್ರಕರ್ತ

ಇ] ಕಾಮ ದಹನ ದ ಬಗ್ಗೆ ಕೆ. ಎಸ್. ನ.

೭. "ತುಂಬಿ ಬಂದಿತ್ತಾ ತಂಗಿ ತುಬಿ ಬಂದಿತ್ತು"

ಅ] ಐ. ಎಮ್. ಎಫ್. ಸಾಲ ಮಂಜೂರಾಗಿ, ಡಾಲರ್ ಹೊಳೆ ಹರಿಯ ತೊಡಗಿದಾಗ ಮನ್‌ಮೋಹನ್ ಸಿಂಗ್–ಮಾರ್ಗರೆಟ್ ಆಳ್ವ ಅವರಿಗೆ

ಆ] ಮಂಗಳವಾರ ನೀರಿಲ್ಲದೇ, ಬುಧವಾರ ಸಾರ್ವಜನಕ ನಲ್ಲಿಯಲ್ಲಿ ಬಕೆಟ್ ತುಂಬಿಸುತ್ತಿದ್ದ ಟವಲು ಕಟ್ಟಿದ ಯಜಮಾನ– ಆನಂದಾತಿರೇಕದಲ್ಲಿ ದಾರಿಯಲ್ಲಿದ್ದ ಚೆಲುವೆಗೆ.

ಇ] ದ.ರಾ, ಬೇಂದ್ರೆ ಕಾವ್ಯ ಸ್ಫೂರ್ತಿಯ ಕ್ಷಣದಲ್ಲಿ

೮. ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯ ಬೇಡಿ"

ಅ] ಪಿ. ವಿ. ನರಸಿಂಹ ರಾವ್ ಅವರು– ಸಿದ್ದುನ್ಯಾಮ ಗೌಡರ ಬಗ್ಗೆ ಬಿ.ಜೆ.ಪಿ. ಎಂ. ಪಿ.ಗಳಿಗೆ

ಆ] ಪ್ರಿನ್ಸಿಪಾಲರು–ಹೊಸ ಲೆಕ್ಚರರ್ ಬಗ್ಗೆ–ಕ್ಲಾಸಿನ ಹಿರಿಯ ವಿದ್ಯಾರ್ಥಿಗಳಿಗೆ

ಇ] ಗೋವು ತನ್ನ ಕರುವಿನ ಬಗ್ಗೆ ತನ್ನ ಸ್ನೇಹಿತೆಯರಿಗೆ.

16

ಸೇರು – ಸವ್ವಾ ಸೇರು

ಶಿವು

ರಾನಿ ಓಸಲ್ಲಿವಾನ್, ಸ್ನೂಕರ್ನಲ್ಲಿ ಫೈನಲ್ ಗೆದ್ದು, ಮೈಸೂರು ಜರಿರುಮಾಲಿನಲ್ಲಿ ಬೆಳ್ಳಿ ಕಪ್ಪು ಹಿಡಿದು ಫೋಟೋ ತೆಗೆಸಿಕೊಂಡನಲ್ಲಾ, ಆ ದಿನ ಸಂಜೆ ಕ್ಲಬ್ಬಿಗೆ ಹೋಗುಕ್ಕೆ ರೆಡಿಯಾಗುತ್ತಿದ್ದೆ. ನನ್ನ ಹೆಂಡತಿ ಪ್ರತ್ಯಕ್ಷ ಆದಳು.

"ಹೇಗಿದ್ದರೂ ಕ್ಲಬ್ಬಿಗೆ ಹೊರಟಿದ್ದೀರಲ್ಲಾ, ಹಾಗೇ ರಮೇಶಣ್ಣನ್ನೂ ಕರೆದ್ಕೊಂಡು ಹೋಗಿ ಇಂದಿರಾನಗರದಲ್ಲಿ ಬಿಡೋಕ್ಕಾಗುತ್ಯೇ?" ಬಲು ನಯವಾದ ಪ್ರಶ್ನೆ.

ಇಲ್ಲ ಅಂತ ಹೇಳೋ ಗಂಡೆದೆ ನನಗೆಲ್ಲಿ ರಮೇಶಣ್ಣ ಇವಳ ಸೋದರಮಾವ. ಹಾಸನದಿಂದ ನಿನ್ನೆ ಬಂದಿದ್ದು, ಇಂದು ಸಂಜೆ ತಮ್ಮನ ಮಗನ ಮನೆಗೆ ಹೊರಟಿದ್ದ. ವೃತ್ತಿಯಲ್ಲಿ ಲಾಯರು. ಒಳ್ಳೇ ಮಾತುಗಾರ.

"ಬಾ ರಮೇಶಣ್ಣ, ನಾನೇ ಡ್ರಾಪ್ ಮಾಡ್ತೀನಿ. ಅರ್ಜೆಂಟ್ ಕೆಲಸ ಏನೂ ಇಲ್ದೇ ಇದ್ರೆ, ನಮ್ಮ ಕ್ಲಬ್‌ಗೆ ಒಂದು ಅರ್ಧ ಘಂಟೆ ಹೋಗಿ ಅಲ್ಲಿಂದ ಮುಂದೆ ಹೋಗೋಣ. ಇವತ್ತು ಅಲ್ಲಿ ಒಂದು ಉದ್ಘಾಟನಾ ಸಮಾರಂಭ ಇದೆ. ನನ್ನ ಸ್ನೇಹಿತರೇ ಮುಖ್ಯ ಅತಿಥಿ" ಅಂತ ಇದ್ದ ವಿಷಯ ವಿವರವಾಗಿ ಹೇಳಿದೆ.

"ಅಂಥಾದ್ದೇನೂ ರಾಜಕಾರ್ಯ ಇಲ್ಲ ಶಿವು. ಹಾಗೇ ಮಾಡೋಣ್ವ, ನಿಮ್ಮ ಕ್ಲಬ್ನೂ ನೋಡಿದ ಹಾಗಾಗುತ್ತೆ. ಬರ್ತೀನಿ ಪಂಕಜ. ಬಾಗಿಲು ಹಾಕಿಕೋಮ್ಮ. ಪುಟ್ಟಿ ಕಾಲೇಜಿಂದ ಬಂದ ಮೇಲೆ, ನಾ ಹೇಳಿದೆ, ಚೆನ್ನಾಗಿ ಓದಿ ಫಸ್ಟ್ ಕ್ಲಾಸ್ ಬರಬೇಕಂತ ಅಂತ ಹೇಳ್ಬಿಡಮ್ಮಾ ಮಗು" ರಮೇಶಣ್ಣ ವಿದಾಯ ಹೇಳಿ ಮುಗಿಸಿದನಂತರ ಕ್ಲಬ್ಬಿಗೆ ಹೊರಟೆವು.

ಆ ಸಂಜೆ, ಕಾಕತಾಳೀಯವಾಗಿ, ನಮ್ಮ ಕ್ಲಬ್ಬಿನಲ್ಲೂ ಒಂದು ಬಿಲಿಯರ್ಡ್ಸ್ ಸಮಾರಂಭ. ಹೊಸ ಮ್ಯಾನೇಜಿಂಗ್ ಕಮಿಟಿ, ಒಂದು ಹೊಸ ಬಿಲಿಯರ್ಡ್ಸ್ ಟೇಬಲ್ ಖರೀದಿಸಿದ್ದು, ಈ ಸಂಜೆ ಅದರ ಉದ್ಘಾಟನೆ. ಮುಖ್ಯ ಅತಿಥಿ ಯಾರು ಅಂತೀರಿ ? ಮಾನ್ಯ ಶ್ರೀ ಸುರೇಶ್ ದೇವಾನಂದಾನಿ–ಸುಪ್ರಸಿದ್ಧ ಚಿತ್ರ ಕಥಾ ಲೇಖಕರು ಹಾಗೂ ಪತ್ರಿಕೋದ್ಯಮಿ, ಅರ್ಥಾತ್ ನಮ್ಮ ದೇವು.

ಕ್ಲಬ್ಬಿನ ಬಿಲಿಯಡ್ರ್ಸ್ ರೂಮು ಸೇರಿದಾಗ ಆರುಘಂಟೆ. ಉದ್ಘಾಟನಾ ಸಮಾರಂಭ ಆರೂವರೆಗೆ ಹೊಸ ಟೇಬಲ್ ಮೇಲೆ ಒಂದು ಸಿಲ್ಕ್ ಹೊದಿಕೆ ಹಾಕಿ. ಅದರ ಸುತ್ತ ಒಂದು ಕೆಂಪು ಟೇಪ್ ಕಟ್ಟಿದ್ದರು. ಹಳೇ ಟೇಬಲ್ಲಿನಲ್ಲಿ, ಕುಪ್ಪಣ್ಣ ಹಾಗೂ ಹೆಗ್ಡೆ ಬಿಲಿಯಡ್ರ್ಸ್ ಆಡ್ತಾ ಇದ್ರು.

"ಇದೇನಾಟಾನೋ ಇದು, ದೊಡ್ಡ ದೊಡ್ಡ ಮರದ ಗೋಲಿ ಇಟ್ಕೊಂಡು?" ರಮೇಶಣ್ಣನಿಗೆ ಅಸಾಧ್ಯ ಕುತೂಹಲ.

"ಇದು ಬಿಲಿಯಡ್ರ್ಸ್ ರಮೇಶಣ್ಣ, ಅಲ್ಲಿ ನೋಡಿ ಟೇಬಲ್ಲಿನ ಮೇಲು ತುದೀಲಿ ತೂತಿನ ಹತ್ತಿರ ಕೆಂಪು ಚೆಂಡಿದೆಲ್ಲಾ, ಅದನ್ನ ಹೆಗ್ಡೆ ತನ್ನ ಬಿಳೀ ಚೆಂಡಿನ ಮೂಲಕ ಹೊಡೆದು ಚೆಂಡನ್ನ ತೂತಿನೊಳಗೆ ನೂಕಬೇಕು" ನಾನು ವಿವರಿಸಲು ಪ್ರಾರಂಭಿಸಿದೆ.

"ಅದ್ಸರಿ, ಆದ್ರೆ ಅವನು ಯಾಕೆ ಹಾಗೆ ಕೋಲಿನ ಒಂದು ತುದೀಯಿಂದ ನೂಕ್ತೀದಾನೆ? ಕೋಲನ್ನ ಅಡ್ಡಡ್ಡಲಾಗಿ ಇಟ್ಕೊಂಡು, ಕ್ರಿಕೆಟ್ ತರಹಾ ಬಾರಿಸಿದ್ರೆ ಇನ್ನೂ ದೂರ ಹೋಗಲ್ವೇ? ಅಲ್ದೆ ಬಿಳೀ ಚೆಂಡಿನ ಮೂಲಕ ಕೆಂಪು ಚೆಂಡಿಗೆ ಏಕೆ ಹೊಡೀಬೇಕು.? ನೇರವಾಗಿ ಕೆಂಪು ಚೆಂಡಿಗೆ ಬಾರಿಸಿದ್ರೆ, ಸರಕ್ಕಂತ ತೂತಿಗೆ ನುಗ್ಗಿಸ್ಬೋದು ಅಲ್ವೇ?"

"ರಮೇಶಣ್ಣ, ನೀವು ಹೇಳಿದ್ದೆಲ್ಲಾ ಮಾಡಬಹುದು. ಆದರೆ ಅದು ಬಿಲಿಯಡ್ರ್ಸ್ ಆಗೋಲ್ಲ. ಇನ್ನಾವುದೋ ಹೊಸ ಆಟ ಆಗುತ್ತೆ ಅಷ್ಟೆ" ಅಂತ ಹೇಳೋ ಹೊತ್ತಿಗೆ ಉದ್ಘಾಟನಾ ಸಮಯ ಸನ್ನಿಹಿತವಾಯಿತು. ಆದು ನನಗೆ ಗೊತ್ತಾದದ್ದು, ಕ್ಲಬ್ಬಿನ ಕಾರ್ಯದರ್ಶಿ, ಪೈಲಟ್ ಕಾರ್ ಥರ ಮೊದಲು ಬಂದು ಹೊಸ ಟೇಬಲ್‌ನ ಟೇಪ್ ಸರಿಯಾಗಿದೆಯೆ ಅಂತ ಪರೀಕ್ಷಿಸಿದಾಗ. ಒಬ್ಬೊಬ್ಬರಾಗಿ ಒಂದು ಇಪ್ಪತ್ತೈದು ಜನ ಅಲ್ಲಿ ಸೇರಿದರು.

ಅಧ್ಯಕ್ಷರೊಂದಿಗೆ ದೇವು ಆಗಮನ. ಅಬ್ಬಬ್ಬ, ಅದೇನು ವೇಷ, ಅದೇನು ಠೀವಿ. ತ್ರೀ–ಪೀಸ್ ಸೂಟ್ ಹಾಕಿಕೊಂಡು, ಗಂಭೀರವಾಗಿ ನಡೆದು ಬಂದ. ಅಧ್ಯಕ್ಷರ ಸ್ವಾಗತ ಭಾಷಣ ಆದ ಮೇಲೆ, ಅರುಣನ ಮಗಳು ಸುಚಿತ್ರಾ ಹಿಡಿದಿದ್ದ ಬೆಳ್ಳಿಯ ತಟ್ಟೆಯ ಮೇಲಿನಿಂದ ಕತ್ತರಿ ತೆಗೆದು, ದೇವು ಟೇಪ್ ಕತ್ತರಿಸಿದಾಗ, ಸಿಲ್ಕ್ ಹೊದಿಕೆ ತಾನಾಗಿಯೇ ಕಳಚಿ ಬಿತ್ತು. ಎಲ್ಲರೂ ಚಪ್ಪಾಳೆ ತಟ್ಟಿದ ನಂತರ, ಅಧ್ಯಕ್ಷರು, ಮುಖ್ಯ ಅತಿಥಿಗಳನ್ನು ಒಂದೆರಡು ಮಾತನಾಡಲು ವಿನಂತಿಸಿಕೊಂಡರು.

ದೇವು ಪ್ರಾರಂಭಿಸಿದ.

"ಅಧ್ಯಕ್ಷರೇ. ಮಹನೀಯರೇ ಮತ್ತು ಇತರ ಜನಗಳೇ.

ಇಂದು ಸಂಜೆ ಇಲ್ಲಿ ಈ ಸ್ನೂಕರ್ ಟೇಬಲ್ಲನ್ನು ಉದ್ಘಾಟಿಸಲು ನನಗೆ ಬಹಳ ಸಂತೋಷ ಅನ್ನಿಸುತ್ತೆ. ಸ್ನೂಕರ್ ಅತಿ ಉತ್ತಮವಾದ ಆಟ. ನಮ್ಮ ನಾಡಿನ ತರುಣ ಪೀಳಿಗೆಯ ತಯಾರಿಗೆ ಅತಿ ಮುಖ್ಯವಾದ ಆಟ ಅಂತಲೂ ಹೇಳಬಹುದು. ನಮ್ಮ ಯುವಕ, ಯುವತಿಯರೆಲ್ಲಾ ಈ ಆಟ ಕಲಿತರೆ, ಅವರುಗಳು ಕೇವಲ ಆಟದಲ್ಲಿ ಅಲ್ಲದೇ ತಮ್ಮ ಜೀವನ ಯಾತ್ರೆಯಲ್ಲೂ ಸಫಲರಾಗಬಹುದು. ಅದು ಹೇಗೆ ಅಂತ ಕೇಳ್ತೀರೋ, ಹೇಳ್ತೀನಿ ಕೇಳಿ. ಸ್ನೂಕರ್‌ನಲ್ಲಿ ಮೊದಲ ಹೆಜ್ಜೆ ಏನು ? ಬಿಳೀ ಚೆಂಡಿನಿಂದ ಹಳದೀ ಚೆಂಡನ್ನು ಬುಟ್ಟಿಗೆ ಬೀಳಿಸೋದು. ಆಮೇಲೆ ಕೆಂಪು ಚೆಂಡು. ಆಮೇಲೆ ಹಸಿರು. ಒಟ್ಟಿನಲ್ಲಿ ಬಣ್ಣ ಬದಲಾಯಿಸ್ತಾ ಇರಬೇಕು. ಈ ಬಣ್ಣ ಬದಲಾಸೋ ಕಲೆಯಲ್ಲಿ ಪರಿಣತರಾದವರಿಗೆ, ಜೀವನ ಸಂಗ್ರಾಮದಲ್ಲಿ ಜಯ ಕಟ್ಟಿಟ್ಟ ಬುತ್ತಿ ಅಲ್ಲವೇ. ಸ್ನೂಕರ್‌ನ ಇನ್ನೊಂದು ಅಂಶ ಅಂದರೆ, ಕೆಂಪು ಚೆಂಡೇ ಆಗಲಿ, ಇನ್ಯಾವ ಬಣ್ಣದ ಚೆಂಡೇ ಆಗಲೀ, ಬುಟ್ಟಿಗೆ ಬೀಳಿಸಿಕೊಳ್ಳೋದು ಅತಿ ಮುಖ್ಯ. ಈ ಬುಟ್ಟಿಗೆ ಹಾಕಿಕೊಳ್ಳುವ ಕಲೆಯಲ್ಲಿ ತಯಾರಿಪಡೆಯಲು, ಸ್ನೂಕರ್‌ಗಿಂತ ಪ್ರಶಸ್ತವಾದ ಆಟ ಇನ್ನೊಂದಿಲ್ಲ. ಈ ಕಲೆ ಕರಗತವಾದರೆ, ತರುಣರು ತಮ್ಮ ಬಾಸ್‌ಗಳನ್ನ ಬುಟ್ಟೀಗೆ ಹಾಕಿಕೊಂಡು ಪ್ರಮೋಷನ್ ಪಡೀಬಹುದು. ತರುಣಿಯರು ತಮ್ಮ ಭಾವೀ ಗಂಡಂದಿರನ್ನ ಬುಟ್ಟಿಗೆ ಹಾಕಿಕೊಂಡರೆ, ರಾಜಕೀಯ ಪುಢಾರಿಗಳು, ಜನಗಳನ್ನೇ ಬುಟ್ಟಿಗೆ ಹಾಕಿಕೊಂಡು ರಾಜ್ಯ ಭಾರ ನಡೆಸಬಹುದು. ಒಟ್ಟಿನಲ್ಲಿ. "

ದೇವುನ ಭಾಷಣ ಅವ್ಯಾಹತವಾಗಿ ಸಾಗಿತ್ತು. ರಮೇಶಣ್ಣ ತದೇಕಚಿತ್ತದಿಂದ ಕೇಳುತ್ತಿದ್ದರು. ಭಾಷಣ ಮುಗಿದ ಮೇಲೆ ದೇವು ನಮ್ಮ ಬಳಿಗೆ ಬಂದ. ನಾನು ರಮೇಶಣ್ಣನನ್ನು ದೇವುಗೆ ಪರಿಚಯಿಸಿದೆ.

ದೇವು "ನಮಸ್ಕಾರ ಸಾರ್, ತಾವು ಇಲ್ಲಿಗೆ ಬಂದದ್ದು ತುಂಬಾ ಸಂತೋಷ. ಕನ್ನಡ ನನ್ನ ಮಾತೃ ಭಾಷೆ ಅಲ್ಲ. ಹಾಗಾಗಿ ಭಾಷೇಲಿ ಏನಾದರೂ ಹೆಚ್ಚುಕಡಿಮೆ ಆಗಿದ್ದರೆ ಕ್ಷಮಿಸಬೇಕು, ಹೇಗೂ ತಾವು ಹಿರಿಯರು" ಅಂತ ನಮ್ರತೆಯಿಂದ ಹೇಳಿದ.

ರಮೇಶಣ್ಣ ದೇವುನ ಒಮ್ಮೆ ಆಳವಾಗಿ ನೋಡಿದರು. ಆ ಮೇಲೆ ನಿಧಾನವಾಗಿ,

"ದೇವಾನಂದಾನಿ ಅವರೇ, ನಿಮ್ಮ ಭಾಷೆ ಅಚ್ಚ ಕನ್ನಡ. ಅದರಲ್ಲಿ ತಪ್ಪೇನು ಬಂತು ? ಆದರೆ, ಸ್ನೂಕರ್ ಆಟ, ನಮ್ಮ ತರುಣ, ತರುಣಿಯರಿಗೆ, ಮುಂಬರುವ ದಿನಗಳಲ್ಲಿ ಮಾರ್ಗದರ್ಶನ ನೀಡಬಹುದು ಅಂದರಲ್ಲಾ, ಆ ಮಾತನ್ನ ಮಾತ್ರ ನಾನು ಒಪ್ಪಲಾರೆ" ಅಂತ ಹೇಳಿ ಸುಮ್ಮನಾದರು.

ದೇವುಗೆ ಕುತೂಹಲ ಕೆರಳಿತು.

"ಯಾಕೆ ಸಾರ್ ಹಾಗೆ ಹೇಳ್ತೀರಿ?"

"ನೋಡ್ರಿ ಈಗಿನ ಕಾಲದಲ್ಲಿ, ಟೇಬಲ್ ಮೇಲೆ ಇಬ್ಬರು ಆಟ ಆಡ್ತಿದ್ರೆ, ಇನ್ನಿಬ್ಬರು ಟೇಬಲ್ ಕಾಲನ್ನೇ ಹಿಡಿದು, ಅನಾಮತ್ತಾಗಿ ಎತ್ತಿ ಬಿಳಿ, ಕಪ್ಪು, ಕೆಂಪು, ನೇರಿಳೆ, ಎಲ್ಲಾ ಬಣ್ಣದ ಚೆಂಡುಗಳೂ ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಹರಡೋ ಹಾಗೆ ಮಾಡ್ತಾರೆ. ಆ ಮೇಲೆ ಇಬ್ಬರು ಆಟಗಾರರ ಪರಟು ಹರಿದು, ಹಲ್ಲು ಮುರಿದು, ಮನೆಗೆ ಕಳಿಸಿ, ಅನಂತರ ತಾವೇ ಗೆದ್ದದ್ದು ಅಂತ ಹೇಳಿ ಚಿನ್ನದ ಪದಕ ಪಡೀತಾರೆ. ಇಂಥ ಆಟದಲ್ಲಿ ತಯಾರಿ ಸಿಕ್ಕಿದ್ರೆ ಮಾತ್ರ ನಮ್ಮ ಯುವ ಪೀಳಿಗೆ ಬಚಾವ್. ನಿಮ್ಮ ನಾಜೂಕಿನ ಆಟ ಇಂಥಾದ್ದೇನೂ ಹೇಳಿ ಕೊಡುಲ್ಲವಲ್ಲಾ" ರಮೇಶಣ್ಣ ಗಂಭೀರವಾಗಿಯೇ ಹೇಳಿದರೂ, ಕಣ್ಣಂಚಿನಲ್ಲಿ ನಗೆ ಇತ್ತು.

ದೇವು "ಲೋ, ಶಿವು, ನಿಮ್ಮ ರಮೇಶಣ್ಣ ಬೆಂಗಳೂರಿನಲ್ಲಿ ಖಾಯಂ ಆಗಿ ಇರುಲ್ಲ ತಾನೆ, ಹಾಗೇನಾದ್ರೂ ಇದ್ದು, ಇಲ್ಲಿಗೆ ದಿನಾ ಬರಲು ಶುರು ಮಾಡಿದ್ರೆ ನನ್ನ ಮಾತು ಕೇಳುಕ್ಕೆ ಗಿರಾಕಿಗಳೇ ಸಿಕ್ಕುಲ್ಲ. ನಾನು ಕ್ಲಬ್ಬಿಗೇ ರಾಜೀನಾಮೆ ಕೊಡ ಬೇಕಾಗುತ್ತೆ. ಬರ್ತೀನಿ ರಮೇಶಣ್ಣ. ನಿಮ್ಮ ಆಶೀರ್ವಾದ ನನ್ನ ಮೇಲಿದ್ರೆ ಸಾಕು" ಅಂತ ಹೇಳಿ ಹೊರಟ.

ಬಲು ಚೂಟಿ ನಮ್ಮ ದೇವು. ಬಲು ಘಾಟಿ ರಮೇಶಣ್ಣ.

"ಡಾಕ್ಟ್ರೇ, ತುಂಬಾ ಅರ್ಜೆಂಟು. ನನ್ನ ಹೆಂಡತಿ ಅಪೆಂಡಿಸೈಟಿಸ್‌ನಿಂದ ನರಳ್ತಾ ಇದಾಳೆ. ಬೇಗ ಬರ್ತೀರಾ ?"

"ಸ್ವಲ್ಪ ಸಮಾಧಾನ ತಂದ್ಕೊಳ್ಳಿ. ಗಾಬರಿ ಆಗ್ಬೇಡಿ. ಮೂರು ವರ್ಷದ ಹಿಂದೇನೇ ನಿಮ್ಮ ಹೆಂಡತೀಗೆ ಅಪೆಂಡಿಕ್ಸ್ ಆಪರೇಷನ್ ಮಾಡಿದ್ದೆ. ಯಾರಿಗೂ ಎರಡು ಅಪೆಂಡಿಕ್ಸ್ ಇರೋದು ನಾನು ಕೇಳೇ ಇಲ್ಲಾರಿ"

"ಅದ್ಸರಿ ಡಾಕ್ಟರ್, ಆದ್ರೆ ಯಾರಿಗಾದ್ರೂ ಎರಡನೇ ಹೆಂಡ್ತಿ ಇರೋದು ಕೇಳಿರ ಬಹುದಲ್ವೇ ?


ಬಿ.ಟಿ.ಎಸ್. ವಾಹನ ಚಾಲಕರ ಸಂಘ
ಶ್ರೀನಿವಾಸಲು

ಪ್ರಪಾತದ ಅಂಚಿನಲ್ಲಿ

ಒಬ್ಬ ಬಾತ್ಮೀದಾರ

ಮೊನ್ನೆ ನಮ್ಮ ಸಂಪಾದಕರು ಹೇಳಿ ಕಳಿಸಿದ್ದರು. ಹೋದೆ.

"ನೋಡ್ರಿ, ದಿನ ಬೆಳಗಾದರೆ, ಚಿನ್ನದ ಸಾಗಾಣೆಗೆ, ರೂಪಾಯಿ ಅಪಮೌಲ್ಯ, ದೇಶದ ಆರ್ಥಿಕ ವ್ಯವಸ್ಥೆಯ ಕುಸಿತ ಅಂತ ಏನೇನೋ ಸುದ್ದಿ ಬರ್‍ತಾ ಇದೆ. ಇವೆಲ್ಲಕ್ಕೆ ನಮ್ಮ ಜನ ಸಾಮಾನ್ಯರ ಪ್ರತಿಕ್ರಿಯೆ ಏನು ಅಂತ ಕಂಡು ಹಿಡಿದು ಒಂದು ವರದಿ ಬರೆದು ಕಳಿಸ್ರಿ" ಅಂತ ಹೇಳಿ ಒಂದು ಲೋಟ ಕಾಫಿ ಕೂಡ ಕೊಡದೆ ಹೊರಗಟ್ಟಿದರು.

ಅವರ ಮನೆಯಿಂದ, ಆಟೋ ತಗೊಂಡು ಪ್ರೆಸ್ ಕ್ಲಬ್‌ಗೆ ಹೋಗ್ತಿದ್ದಾಗ, ನನ್ನ ಮುಂದಿದ್ದ ಜ್ವಲಂತ ಪ್ರಶ್ನೆ ಅಂದರೆ, ಈ ಜನ ಸಾಮಾನ್ಯರಿಂದ ಅಭಿಪ್ರಾಯ ಸಂಗ್ರಹಣೆ. ಆಟೋ ಡ್ರೈವರ್ ಕೂಡ ಜನ ಸಾಮಾನ್ಯ ತಾನೆ, ಅವನನ್ನೇ ಮೊದಲು ಕೇಳೋಣ ಅಂದುಕೊಂಡು "ದೇಶದ ಆರ್ಥಿಕ ವ್ಯವಸ್ಥೆಯ ಕುಸಿತದ ಬಗ್ಗೆ ನಿನ್ನ ಅಭಿಪ್ರಾಯ ಏನಣ್ಣಾ ?" ಅಂತ ಕೇಳಿದೆ. ನಿರುತ್ತರ. ಅವನ ಪಾಡಿಗೆ ಅವನು ಆಟೋ ನಡೆಸುತ್ತಲೇ ಇದ್ದ. ಆಟೋ ಶಬ್ದದಲ್ಲಿ ನಾನು ಹೇಳಿದ್ದು ಕೇಳಿಸಲಿಲ್ಲವೇನೋ ಪಾಪ. ಪುನಃ ಕೇಳೋಣ ಅಂತ ಜೋರಾಗಿ "ರೀ, ಡ್ರೈವರ್" ಅಂತ ಕೂಗಿದೆ.

ಅವ ಫಟ್ಟನೆ ನನ್ನ ಕಡೆ ತಿರುಗಿ "ಯಾಕೆ ಸಾರ್? ಏನಾಯ್ತು?" ಅಂತ ಗಾಭರಿಯಿಂದ ಕೇಳಿದ. ಅಷ್ಟು ಹೊತ್ತಿಗೆ ಸರಿಯಾಗಿ ನಮ್ಮ ಆಟೋ ಓವರ್ ಟೇಕ್ ಮಾಡುತ್ತಿದ್ದ ಎತ್ತಿನ ಗಾಡಿಯ ಎತ್ತು ಬಲಕ್ಕೆ ತಿರುಗಿತು. ಆಟೋ ಮುಂಭಾಗ ಗಾಡಿಯ ಚಕ್ರಕ್ಕೆ ಮುತ್ತು ಕೊಟ್ಟು ವಿರಹ ವೇದನೆಯಿಂದ ಪಲ್ಟಿ ಹೊಡೆಯಿತು. ಸಧ್ಯ! ದೇವರ ದಯೆ. ಸ್ವಲ್ಪ ತರಚಿದ್ದು ಬಿಟ್ಟರೆ ಡ್ರೈವರ್‌ಗಾಗಲೀ, ನನಗಾಗಲೀ ಅಂತಹದೇನೂ ಪೆಟ್ಟಾಗಲಿಲ್ಲ. ಆಟೋವನ್ನ ಪುನಃ ನೇರವಾಗಿ ನಿಲ್ಲಿಸಿ, ಸ್ಟಾರ್ಟ್ ಮಾಡಿ ಹೊರಟೆವು. ಪುನಃ ಪ್ರಶ್ನೆ ಕೇಳುವ ಎದೆಗಾರಿಕೆ ನನ್ನಲ್ಲಿರಲಿಲ್ಲ

ಪ್ರೆಸ್ ಕ್ಲಬ್‌ನಲ್ಲಿ ಕುಳಿತಿದ್ದಾಗ ದಿಢೀರನೆ ಒಂದು ಯೋಚನೆ ಹೊಳೆಯಿತು. ಒಂದು ಪ್ರಶ್ನಾವಳಿ ತಯಾರಿಸಿ, ಬೇರೆ ಬೇರೇ ವರ್ಗದ ಹಲವು ಪ್ರಾತಿನಿಧಿಕ ಜನ

ಸಾಮಾನ್ಯರಿಗೆ ಅದನ್ನ ಹಂಚಿ, ಮಾರನೆಯ ದಿನ ಅವರ ಉತ್ತರಗಳನ್ನ ಸಂಗ್ರಹಿಸಿ ಕೊಟ್ಟರೆ, ನನ್ನ ಕೆಲಸ ಮುಗಿದ ಹಾಗೆಯೇ ಅನ್ನಿಸಿತು. ಪ್ರಶ್ನಾವಳಿ ಅರ್ಧ ಘಂಟೆ ಯಲ್ಲಿ ಸಿದ್ಧವಾಯಿತು.

೧) ರೂಪಾಯಿ ಅಪಮೌಲ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

೨) ವಿದೇಶೀ ವಿನಿಮಯದ ಕೊರತೆಗೆ ಪರಿಹಾರ ಇದೆಯೇ ?

೩) ಬೆಲ್ಟುಗಳನ್ನು ಬಿಗಿಪಡಿಸಬೇಕೆಂಬ ಸಲಹೆಗೆ ನಿಮ್ಮ ಪ್ರತಿಕ್ರಿಯೆ ?

೪) ಖಾಸಗೀಕರಣದ ಉಪಯುಕ್ತತೆ ಹೇಗೆ ?

೫) ಬೆಲೆ ಏರಿಕೆಯನ್ನು ತಡೆಗಟ್ಟಲು ಸಾಧ್ಯವೇ ?

ಈ ಮೇಲಿನ ಐದು ಪ್ರಶ್ನೆಗಳಲ್ಲಿ ಯಾವುದೇ ಪ್ರಶ್ನೆಗೆ ಉತ್ತರ ತಿಳಿದಿದ್ದರೆ ಬರೆದು ತಿಳಿಸಿ ಅಂತ ಟಿಪ್ಪಣಿ ಬರೆದು, ದಿನವೆಲ್ಲಾ ಅಲೆದು.ಪ್ರಶ್ನಾವಳಿಯನ್ನು ಹಂಚಿ ದ್ದಾಯಿತು. ಎರಡು ದಿನಗಳನಂತರ ಹಲವು ಉತ್ತರಗಳೂ ದೊರಕಿದವು. ಇಲ್ಲಿ ನೋಡಿ ಪ್ರಾತಿನಿಧಿಕ ಜನ ಸಾಮಾನ್ಯರ ಪ್ರಬುದ್ಧ ಪ್ರತಿಕ್ರಿಯೆಗಳು.

ಕಿಶನ್ ಚಂದ್ ಬೆಲ್ಟ್‌ವಾಲಾ (ಸುಪ್ರಸಿದ್ಧ ಬೆಲ್ಟ್ ತಯಾರಕರು)

ಬೆಲ್ಟುಗಳನ್ನು ಬಿಗಿಪಡಿಸಬೇಕೆಂಬ ಸಲಹೆಯನ್ನು ನಾನು ಖಂಡಿತ ಒಪ್ಪುತ್ತೇನೆ ಮುದುಕರು, ಮಕ್ಕಳು ಸೇರಿದಂತೆ, ಭಾರತದ ಪ್ರತಿಯೊಬ್ಬ ಪ್ರಜೆಯೂ ತನ್ನ ಬೆಲ್ಟನ್ನು ಬಿಗಿಯಾಗಿ ಕಟ್ಟಬೇಕೆಂದು ರಾಷ್ಟ್ರಾಧ್ಯಕ್ಷರು ಸುಗ್ರೀವಾಜ್ಞೆಯನ್ನು ಹೊರಡಿಸ ಬೇಕು. ಇದಕ್ಕಾಗಿ ಸರ್ಕಾರವೇ ರಿಯಾಯಿತಿ ದರದಲ್ಲಿ ಬೆಲ್ಟ್‌ಗಳನ್ನು ಸರಬರಾಜು ಮಾಡುವ ಹೊಣೆಯನ್ನು ಹೊರಬೇಕು. ಬೆಲ್ಟ್ ತಯಾರಕರ ಪರವಾಗಿ, ದೇಶಕ್ಕೆ ಅಗತ್ಯವಿರುವ 80 ಕೋಟಿ ಬೆಲ್ಟ್‌ಗಳನ್ನು ಒಂದೇ ವರ್ಷದಲ್ಲಿ ತಯಾರಿಸಿ ವಿತರಿಸಲು ನಾವೆಲ್ಲಾ ಕಂಕಣಬದ್ಧರಾಗಿದ್ದೇವೆ.

ಟೊಯಮಪ್ಪೂರು ಕಂದ ಸ್ವಾಮಿ (ಖ್ಯಾತ ನೋಟ್ ಮುದ್ರಕರು)

ರೂಪಾಯಿ ಅಪಮೌಲ್ಯದಿಂದ ನಮ್ಮ ಕೈಗಾರಿಕೆಗೆ ತೀರ ಅನ್ಯಾಯವಾಗಿದೆ. ಕೆಲವೇ ದಿನಗಳಲ್ಲಿ ನಮ್ಮ ಸಾಮಗ್ರಿಯ ಬೆಲೆ ಶತಾಂಶ ಇಪ್ಪತ್ತರಷ್ಟು ಇಳಿದು ಹೋಯ್ತಲ್ಲ ಸ್ವಾಮಿ. ನಮಗೆ ಈ ನಷ್ಟಾನ ಯಾರು ತುಂಬಿ ಕೊಡ್ತಾರೆ ? ಅಷ್ಟೆ ಅಲ್ದೆ ಈಗ ಪೇಪರ್ ಬೆಲೆ, ಇಂಕ್ ಬೆಲೆ ಎಲ್ಲಾ ಜಾಸ್ತಿ ಆಗೋದರಲ್ಲಿದೆ. ದೇಶದ ಆರ್ಥಿಕ ಭದ್ರತೆಯನ್ನ ಕಾಪಾಡಬೇಕಾದರೆ ನಮ್ಮ' ಅಖಿಲ ಭಾರತ ನೋಟ್

ಮುದ್ರಕರ ಸಂಘಕ್ಕೆ ಮಾನ್ಯತೆ ಕೊಟ್ಟು, ನಮ್ಮ ನೋಟುಗಳೆನ್ನು ಅಧಿಕೃತ ಚಲಾವಣೆಯಲ್ಲಿ ಸೇರಿಸಬೇಕು. ಆಗ ನೋಡಿ, ದೇಶದಲ್ಲಿ ಹಣದ ಹೊಳೆ ಹೇಗೆ ಹರಿಯುತ್ತೆ ಅಂತ.

ಕಂಡಕ್ಟರ್ ಕಮಲೇಶ (ಬಸ್ ಕಂಡಕ್ಟರ್)

ಖಾಸಗೀಕರಣ ಬೇಡ ಅಂತ ನನ್ನ ಹಲವಾರು ಸಹೋದ್ಯೋಗಿಗಳು ಹೇಳ್ತಾರೆ ಅನ್ನೋದು ನಿಜ. ಆದರೆ ಅದು ಅಜ್ಞಾನದ ಮಾತು. ನನ್ನ ಮಟ್ಟಿಗೆ ಹೇಳೋದಾದರೆ, ನಮ್ಮ ನಾಡಿನ ಬಸ್ ಸರ್ವೀಸ್‌ನೆಲ್ಲಾ ಖಂಡಿತವಾಗಿ ಖಾಸಗೀಕರಣ ಮಾಡಬೇಕು. ಆದರೆ, ಯಾವುದೇ ಒಬ್ಬ ಹಣವಂತ ಹೆಗ್ಗಣಕ್ಕೆ ಬಸ್ ಕಂಪನಿ ಮಾರೋ ಅಂತಹ ಖಾಸಗೀಕರಣ ಅಲ್ಲ ನಾನು ಹೇಳ್ತಾ ಇರೋದು. ನನ್ನ ಪ್ರಕಾರ ಬಸ್ ಸರ್ವೀಸನ್ನು ಡ್ರೈವರ್ ಹಾಗೂ ಕಂಡಕ್ಟರ್‌ಗಳೇ ನಡೆಸಬೇಕು. ನಮಗೆ ಸಂಬಳಾನೇ ಬೇಡ. ನಾವೇ ಟಿಕೆಟ್‌ಗಳನ್ನ ಅಚ್ಚು ಹಾಕಿಸಿ ಪ್ರಯಾಣಿಕರಿಗೆ ಟಿಕೆಟ್ ಮಾರಿ, ಬಂದ ದುಡ್ಡಿನಲ್ಲಿ ನಮ್ಮ ನಮ್ಮ ಸಂಬಳಗಳನ್ನ ಹಂಚಿಕೋತೇವೆ. ಸರ್ಕಾರದೋರು ಕೇವಲ, ಬಸ್‌ಗಳ ದುರಸ್ತಿ ಹಾಗೂ ಪೆಟ್ರೋಲ್ ಖರ್ಚು ನೋಡಿಕೊಂಡ್ರೆ ಸಾಕು.

ಹರೀಷ್ ಷಾ (ಹವಾಲಾ ಮರ್ಚೆಂಟ್)

ವಿದೇಶೀ ವಿನಿಮಯದ ಕೊರತೆ ಇದೆ ಅಂತ ಯಾರು ಹೇಳಿದ್ರು ನಿಮಗೆ? ಡಾಲರ್, ಪೌಂಡ್, ಮಾರ್ಕ್, ಯೆನ್. ಯಾವುದು ಎಷ್ಟು ಬೇಕು ಹೇಳಿ. ನಾನು ವ್ಯವಸ್ಥೆ ಮಾಡ್ತೀನಿ. ಅಂಗೈನಲ್ಲಿ ಬೆಣ್ಣೆ ಇಟ್ಕೊಂಡು ತುಪ್ಪಕ್ಕೆ ಅಲೆದ ಹಾಗಾಯ್ತು ನಿಮ್ಮ ಸಮಾಚಾರ. ನಮ್ಮ ಸಂಘದ ಅಧ್ಯಕ್ಷರು ಆಗಲೇ ಸರ್ಕಾರಕ್ಕೆ ಬರೆದಿದ್ದಾರೆ, ಮಾನ್ಯತೆ ಕೊಡಿ ಅಂತ. ಮಾನ್ಯತೆ ಸಿಕ್ಕ ತಕ್ಷಣ, ನಿಮ್ಮ ರಿಸರ್ವ್ ಬ್ಯಾಂಕ್‌ಗೆ ನಾವೇ ಸರಬರಾಜು ಮಾಡ್ತೇವೆ. ವಿದೇಶೀ ವಿನಿಮಯನ. I.M.F.ಗೆ ಒತ್ತೆ ಇಡೋ ಚಿನ್ನದಲ್ಲಿ ಅರ್ಧ ಭಾಗ ನಮಗೆ ಕೊಡಲಿ ಸಾಕು.

ಆರುಮ್ಮೆ ಮಗನ್ (ರಾಜಕಾರಣಿ)

ದೇಶದ ಮುನ್ನಡೆಗಾಗಿ. ಸುಭದ್ರ ಆರ್ಥಿಕ ವ್ಯವಸ್ಥೆಗಾಗಿ ನಮ್ಮ ಪಕ್ಷ ಕಂಕಣ ಬದ್ಧವಾಗಿದೆ. ಆದರೆ ಸಾಮಾಜಿಕ ನ್ಯಾಯವಿಲ್ಲದೇ ಯಾವ ಮುನ್ನಡೆಯೂ ಸಾಧ್ಯವಿಲ್ಲ. ಶೇಕಡ ಅರುವತ್ತರಷ್ಟು ಹುದ್ದೆಗಳನ್ನು ಸಮಾಜದ ಶೋಷಿತ ವರ್ಗಕ್ಕೆ

ಮೀಸಲಿಟ್ಟು ಈ ಹುದ್ದೆಗಳನ್ನು ತುಂಬಿದ ನಂತರವೇ ದೇಶದ ಆರ್ಥಿಕ ಪ್ರಗತಿ ಸಾಧ್ಯ.

ಈ ಮೀಸಲಾತಿ, ಕೇವಲ ನಮ್ಮ ದೇಶಕ್ಕೇ ಅಲ್ಲ. ಬದಲಾಗಿ ನಮ್ಮೊಡನೆ ಸಂಬಂಧವಿರುವ ಎಲ್ಲ ಸಂಘ-ಸಂಸ್ಥೆಗಳಿಗೂ ಅನ್ವಯಿಸಬೇಕು. ಮುಖ್ಯವಾಗಿ I.M.F.ನ ಎಲ್ಲ ಅಧಿಕಾರ ವರ್ಗದಲ್ಲೂ ಶೇಕಡ ಅರುವತ್ತರಷ್ಟು ಜನ ನಮ್ಮ ಪಂಗಡದವರಾಗಿರಬೇಕು. ಇದಕ್ಕಾಗಿ ನ್ಯೂಯಾರ್ಕ್‌ನ I.M.F. ಕಛೇರಿಯ ಮುಂದೆ ನಮ್ಮ ಪಾರ್ಟಿ ಅಧ್ಯಕ್ಷರ ಆಮರಣಾಂತ ಉಪವಾಸ.

ಮಾರತ್ ಹಳ್ಳಿ ಮರಿಯಮ್ಮ (ತರಕಾರಿ ಮಾರುವಾಕೆ)

ಔದು ಸಾಮಿ, ಈ ಉಳ್ಳಾಗೆಡ್ಡೆ ಬೆಲೆ ಗುಡ್ಡೇಗೆ ನಾಲ್ಕಾಣೆ ಜಾಸ್ತಿ ಮಾಡಿವ್ನಿ. ಮಂಡಿ ಅತ್ರ ಬಿದ್ದಿರೋ ಹುಳಕು, ಪಳಕು ಗೆಡ್ಡೀನೆಲ್ಲಾ ಆಯ್ದು ತಂದು, ಈ ಮಾರ್ಕೆಟ್ ಇಂದಿನ್ ಗೇಟ್‌ನಾಗೆ ಗುಡ್ಡೇ ಹಾಕ್ಕೊಂಡು, ಕೂಲಿ ಆಳುಗಳ್ಗೆ ಮಾರಿ ನಾಕ್ಕಾಸು ಗಿಟ್ಟಿಸಿದ್ರೇ ನನ್ಗೆ ಇವತ್ತಿನ ಊಟ. ಮೊನ್ನೇ ವೆಗರ್ಗೂ ಒಂದು ತಟ್ಟೆ ಚಿತ್ರಾನ್ನಕ್ಕೆ ಒಂದು ರೂಪಾಯಿ. ಇವತ್ತಿಂದ ಒಂದೂ ಕಾಲು ಅಂತಾನೆ ಉನ್ನಿ. ಬೆಲೆ ಜಾಸ್ತಿ ಮಾಡ್ದೆ ಇದ್ರೆ ನಾನು ಊಟ ಹೆಂಗ್ಮಾಡ್ಲಿ ಬುದ್ಧೀ ?

ಹೆಣ್ಣು–ಗಂಡು

ಮಗಳ ಕೊಡುವೆ ಅಂದ ನಮ್ಮಪ್ಪ
ಸಾವಿರಾರು ಕೊಡು ಅಂದ ಅವನಪ್ಪ
ಹೆತ್ತವರಿಗೆ ತಣ್ಣೀರು
ನನಗೆ ಕಣ್ಣೀರು
ಆದರೆ ಇಂದು ?
ನನ್ನ ಆರೆತಾಸಿನ ಸಂಗಕ್ಕೆ
ಸುರಿಯುತ್ತಾನವನು ನೂರಾರು !

— ರಂ



"ಬರ್ಕೊಳ್ರೀ, ನಂ ಪಾರ್ಟಿ ಅಧಿಕಾರಕ್ಕೆ ಬಂದ್ರೆ, ನೂರು ದಿನಗಳಲ್ಲಿ ಪೆಟ್ರೋಲ್ ಬೆಲೆ ಅಕ್ಕಿ ಬೆಲೆ, ರೂಪಾಯಿ ಬೆಲೆ ಎಲ್ಲಾ ಇಳಿಸ್ತೀವಿ".

ನುಡಿ ಕಿಡಿಗಳು

— ದೊಡ್ಡರಂಗೇಗೌಡ

ತರ–ಥರ

ಬಿತ್ತಿದ್ದೆಲ್ಲಾ ಬೆಳೆಯಾಗಲಿಲ್ಲ
ಆಧುನಿಕ ನೆಲದಲ್ಲಿ....
ದಾಂಪತ್ಯಗಳು ಫಲಕೊಟ್ಟವಲ್ಲಾ !
ಭೂಮಿಗೇ ಹೊರೆಯಾಗಿ !

ಯುವ ನೀತಿ

ಸಾಯಬೇಕೆಂದು ಬಯಸಿದಾಗ
ನಾಪತ್ತೆಯಾಗಿದ್ದ ಜವರಾಯ ;
ಬದುಕಬೇಕೆಂದು ಇಚ್ಛಿಸಿದಾಗ
ಬಂದು ಮಾತಾಡಿಸಿದ್ದ ಮಹಾರಾಯ !

ಸಾಧನೆ

ಜಗಳಾಡಿಕೊಂಡು
ಹೇಗಾದರೂ ಬದುಕ್ತೀನೆಂದು
ಮನೆ ಬಿಟ್ಟ ಮಗ....
ಮದುವೆ ಮಾಡಿಕೊಂಡು
ಮನೆಗೆ ಬಂದ
ಹೊಸ ತೊಂದರೆಯನ್ನೂ
ಜೊತೆಗೆ ತಂದ !

ನಿಯತಿ

ಹಾವೆಂದು ಓಡೋಡಿ
ಒಂದೆಡೆ ಅವಿತುಕೊಂಡೆ,
ನಿಂತ ನಿಂತಲ್ಲೇ ಚೇಳು
ಚಟುಕ ಮುಳ್ಳಾಡಿಸಿತ್ತು !

ದೌರ್ಬಲ್ಯ

ವ್ಯಕ್ತಿ ಹಣ್ಣಾದರೂ
ಕುಯುಕ್ತಿ ಮನ ಕಣ್ತೆರೆಯಲಿಲ್ಲ,
ಮಣ್ಣಿಗೆ ಹೋಗುವ ವಯಸ್ಸಾದರೂ
ಒಳಗಿನಾಸೆ ಮುದಿಯಾಗಲಿಲ್ಲ !

ಅಂಚೆಯವಳು

—ಕಂಭಂ. ಕೃಷ್ಣಮೂರ್ತಿ

"ಏನ್ರೀ, ಅವನಿಗೆ ಕಣ್ಣಿಲ್ಲವೇನ್ರಿ ?"

"ಇದೆ...."

"ಸರಿಯಾಗಿ ಓದೋಕೆ ಬರೊಲ್ವೆ ?"

"ಬರುತ್ತೆ...."

"ಜ್ಞಾನ ಇಲ್ಲವೇನ್ರೀ ?"

"ಇದೆ".

"ಮತ್ತೆ ನನಗೆ ಬರೋ ಕಾಗದಗಳನ್ನೆಲ್ಲಾ ಆ ಸಿಂಗ್ಲಾಚಾರಿ ಮನೆಗೆ ಹಾಕಿದ್ದಾಳಲ್ಲ ಇದಕ್ಕೆ ಏನು ನಿಮ್ಮ ಅಂಬೋಣ?" ಎಂದು ಗುಂಡಪ್ಪ ಕೂಗಾಡಿದಾಗ, "ಯಾರನ್ನಯ್ಯಾ ನೀನು ಹೇಳೋದು?" ಎಂದು ಅರ್ಥವಾಗದೆ ಕೇಳಿದರು, ವೇದ ಬ್ರಹ್ಮಕೃಷ್ಣಾಚಾರ್ರು.. "ಇನ್ಯಾರನ್ನ ಸ್ವಾಮಿ, ಅದೇ ಆ ಪೋಸ್ಟ್‌ಮನ್ನು" ತಮ್ಮ ಮೂರನೆ ಕುಮಾರ್ತಿಯ ಮೇಲೆ ಈ ಬ್ರಹ್ಮಚಾರಿ, ಗುಂಡ ಹೇಳ್ತಿದ್ದಾನೋ ಅಂಬೋ ಗುಮಾನಿಯಲ್ಲಿದ್ದ, ಅವರಿಗೆ ಈಗ ಅರ್ಥವಾಗಿತ್ತು. ಗುಂಡಪ್ಪ ಕೂಗಾಡ್ತಿದ್ದುದು, ಆ ರಸ್ತೆಗೆ ಬರುತ್ತಿದ್ದ. ಅಂಚೆಯವಳಾದ ಶಾರದಮ್ಮನ ಮೇಲೆ ಅಂತ.

"ಪೋಸ್ಟ್‌ಮ್ಯಾನ್ ಅಲ್ಲಯ್ಯಾ. ಪೋಸ್ಟ್‌ಉಮನ್ನೂ ಅನ್ನು".

"ಯಾವ್ದೊ ಒಂದು. ಅಲ್ರೀ ನಂಗೂ ಸಿಂಗ್ಲಾಚಾರಿಗೂ ವ್ಯತ್ಯಾಸವಿಲ್ಲವೆ ? ಅವನ ಮುಸುಡಿಗೂ, ನನ್ನ ಮುಖಕ್ಕೂ ವ್ಯತ್ಯಾಸವಿಲ್ಲವೆ ?" -

"ಇದೆ...." ;

"ಮತ್ತೆ, ಯಾಕ್ರೀ, ನನಗೆ ಬಂದ ಕಾಗದಗಳನ್ನೆಲ್ಲಾ ಅವನ ಮನೆಗೆ ಹಾಕೋದು ? ಕಾಗದ ಬರೆಯೋರು, ಮಸಲಾ ಮನೆ ನಂಬರನ್ನ ತಪ್ಪಾಗಿ ಬರೆದಿರಬಹುದು. ಆದ್ರೆ ಯಾರ ಹೆಸರಿಗೆ ಕಾಗದ ಇದೆ ಅಂತ ನೋಡಬ್ಯಾಡ್ವೆ.... ?"

ಉಂಡೆ ನಶ್ಯವನ್ನು ಸುಣ್ಣ ಹಾಕಿದ ಕೈಗೆ ಹಾಕಿಕೊಂಡು ರಸವತ್ತಾಗಿ ತಿಕ್ಕಿ, ಒಂದು ಚಿಟಕಿಯನ್ನು ನಾಸಿಕಕ್ಕೇರಿಸಿಕೊಂಡು, ಸಂತೃಪ್ತ ಗಣಪನಂತೆ, ಗುಂಡಪ್ಪನ

ಕಡೆ ನೋಡಿದರು. ಗಂಟಲು ಸರಿಪಡಿಸಿಕೊಂಡು, ಅಪ್ಪಣೆ ಕೊಡಿಸಿದರು ಕೃಷ್ಣಾಚಾರ್ರು.

"ಗುಂಡಪ್ಪ ಈಗ ಕಾಲ ಬದಲಾಗಿದೆ. ಎಲ್ಲಾ ನಂಬರುಗಳ ಕಾಲಾಪ್ಪ. ಹೆಸರು, ಕುಲ, ಜಾತಕಗಳನ್ನ ನೋಡೋಕೆ ಈಗ ಪುರಸೊತ್ತೆಲ್ಲಿರುತ್ತೆ ಹೇಳು ? ನಿನ್ನ ಮನೆ ನಂಬ್ರು 287. ಸಿಂಗ್ಲಾಚಾರಿ ಮನೆ ನಂಬ್ರು 782. ನಿನಗೆ ಕಾಗದ ಬರೆಯೋದು, 287ಕ್ಕೆ ಬದಲಾಗಿ 782 ಬರೆದಿದ್ರೆ ಆ ಹೆಣಮಗಳು ತಾನೇ ಏನು ಮಾಡಿಯಾಳು ಹೇಳು?" ಎಂದು ಕೃಷ್ಣಾಚಾರ್ರು ಹೇಳಿದಾಗ

"ನೀವು ಅವಳ್ನ ವಹಿಸಿಕೊಂಡು ಮಾತನಾಡಬ್ಯಾಡಿ ಸ್ವಾಮಿ" ಎಂದು ಗುಂಡಪ್ಪ ಖಾರವಾಗಿಯೇ ಹೇಳಿದ.

"ಹಾಂಗಲ್ಲಾ ಗುಂಡಪ್ಪ, ಮೊನ್ನೆ ಬ್ಯಾಂಕಿನಾಗೆ ಹೇಳ್ತಿನಿ, ನನ್ನ ಖಾತೆಗೆ ಜಮಾ ಬರಬೇಕಿದ್ದ ಹಣಾನೆಲ್ಲಾ, ಆ ಗಂಡ ಸತ್ತ ಮುಂಡೆ, ಸಕೇಳಿ ಎಂಕಮ್ಮನ ಹೆಸರಿಗೆ ಜಮಾ ಮಾಡಿದ್ದಾರಲ್ಲಾ ಇದಕ್ಕೇನು ನಿನ್ನ ಅಂಬೋಣ ?"

"ನೀವು ನಿಮ್ಮ ಹೆಸರು ಜಮಾ ರಸೀತೀಲಿ ಬರದಿರಲಿಲ್ಲ ಅಂತ ಕಾಣ್ಸುತ್ತೆ"

"ಯಾರಯ್ಯಾ ಹೇಳಿದ್ದು. ಒಳ್ಳೆ ಲಾಡು ಉಂಡೆ ಗಾತ್ರದ ಅಕ್ಷರದಲ್ಲೇ ನನ್ನ ಹೆಸರು ಬರದಿದ್ದೆ."

"ನಿಮಗೂ ಆಕೆಗೂ ಏನಾದ್ರು ಸಂಬಂಧ" ಎಂದು ರಾಗವೆಳೆದಾಗ ಕೃಷ್ಣಾ ಚಾರ್ರು ಹೌಹಾರಿದರು. "ಶಿವ....ಶಿವ....ಗುಂಡಪ್ಪ ಎಲ್ಲಾದ್ರು ಉಂಟೇನಯ್ಯ. ನಿನ್ನ ನಾಲಿಗೇಲಿ ಬರೋ ಮಾತೇನಯ್ಯಾ ಇದು ?"

"ಮತ್ತಿನ್ನೇನು ಆಚಾರ್ರೆ, ನಿಮಗೂ ಆಕೆಗೂ ಸಂಬಂಧಯಿಲ್ಲಾಂತೀರಿ. ಪೇ ಇನ್ ಸ್ಲಿಪ್‌ನಲ್ಲಿ ನಿಮ್ಮ ಹೆಸರನ್ನು ಬರೆದಿದ್ದೀನಿ ಅಂತೀರಾ. ಹಾಗಿದ್ರೆ ಅದ್ಯಾಕೆ ಎಂಕಮ್ಮನ ಖಾತೆಗೆ ನಿಮ್ಮ ಹಣ ಜಮಾ ಆಯ್ತು.... ?".

"ನಾನೂ ಅದ್ನೇ ಕೇಳಿದ್ದಕ್ಕೆ ಅಲ್ಲಿ ಕೂತಿದ್ದ ಚೋಟುದ್ದದ ಹುಡುಗಿ 'ನಿಮ್ಮ ಅಕೌಂಟ್ ನಂಬ್ರು ಸರಿಯಾಗಿ ಬರೆದಿದ್ದ್ರೇನ್ರಿ, ಅಂತ ಕೇಳಿದಳು. ನಂಗೂ ನೆಪ್ಪಿಲ್ಲ. ಕೊನೆಗೆ ಕಡತ ತೆಗೆಸಿ ನೋಡಿದ್ರೆ, 382 ನನ್ನ ಖಾತೆ ನಂಬ್ರು, ಅದಕ್ಕೆ ಬದಲಾಗಿ 283 ಅಂತ ಬರದಿದ್ದೆ. ಅದು ಎಂಕಮ್ಮನ ನಂಬ್ರು. 'ತಾಯಿ ಖಾತೆಗೆ ಜಮಾ ಮಾಡೋವಾಗ ಹೆಸರನ್ನ ನೋಡಬ್ಯಾಡ್ವೆ' ಅಂತ ಕೇಳಿದ್ದಕ್ಕೆ, 'ಏನ್ರೀ ನಿಮ್ಮ ಹೆಸರು, ಕುಲ, ಜಾತಕ ಎಲ್ಲಾ ನೋಡ್ಕೊಂಡು ಕೂತುಕೊಳ್ಳೋಕೆ ನಮಗೇನು ಬ್ಯಾರೆ

ಕೆಸುಬಿಲ್ವ. ನಿಮಗೆ ಯಾಕ್ರೀ ನಂಬ್ರು ಕೊಟ್ಟಿರೋದು ? ಕೊಟ್ಟಿರೋ ನಂಬರನ್ನ ಸರಿಯಾಗಿ ಬರೀದೆ ನಮ್ಮನ್ನ ಸುಮ್ನೆ ಕಾಡ್ತೀರಲ್ರಿ "ನನಗೇ ದಬಾಯಿಸಿದಳು...." "ಸಧ್ಯ ಪುಣ್ಯಾತಿಗಿತ್ತಿ, ಎಂಕಮ್ಮ ಖಾತೆಯಿಂದ ಹಣ ತೆಗೆದಿರಲಿಲ್ಲ. ನನ್ನ ಪುಣ್ಯ...." ಕೃಷ್ಣಾಚಾರ್ರು ಮತ್ತೊಂದು ನಶ್ಯದ ಉಂಡೆಯನ್ನು ಮೂಗಿಗೆ ಗಿಡಿದುಕೊಂಡರು.

"ಏನೇ ಹೇಳಿ. ಆಚಾರ್ರೇ, ಈ ಹುಡುಗೀರ್ಗೆ ಬಲೇ ಪೊಗರು ಜಾಸ್ತಿಯಾಗಿದೆ. ಅಲ್ಲಾ ಇವಳಿಗೂ ಮುಂಚೆ ರಾಮಾಶಾಸ್ತ್ರಿ ಅಂತ ಪೋಸ್ಟ್‌ಮನ್ನಿದ್ನಲ್ಲಾ, ಏನು ನಯ, ಏನು ವಿನಯ. ನಾನು ಅಡುಗೆ ಮನೇಲಿ, ಕಾಫಿ ಕುಡೀತಿದ್ರೆ ಅಲ್ಲಿಗೇ ನನ್ನ ಕಾಗದ ತಂದುಕೊಡೋನು. ಗುಂಡಪ್ಪ ಅಂತ ವಿಳಾಸ ಇರಬೇಕಾಗೇ ಇಲ್ಲ ಸ್ವಾಮಿ, ಬರೀ ಗುಂ, ಬೆಂಗಳೂರು ಅಂತಿದ್ರೂ ಸಾಕು, ಗುಂಡಪ್ಪನೋರೆ ನಿಮ್ಮ ಕಾಗದ ತಗೊಳ್ಳಿ' ಅಂತ ಕೈಗೇ ತಂದುಕೊಡೋನು. ಆದ್ರೆ ಈಕೆ, ಕಾಗದಾನ ಕಾಂಪೌಂಡು ಹೊರಗಿನಿಂದಲೇ ಎಸೆದು ಹೋಗ್ತಾಳಲ್ಲಾ, ಇದು ದುರಹಂಕಾರ ವಲ್ಲದೇ ಮತ್ತೇನು ಆಚಾರ್ರೆ....?"

"ಹಾಂಗಲ್ಲಾ ಗುಂಡಪ್ಪ, ನೀನು ಬ್ರಹ್ಮಚಾರ್ರಿ, ಒಬ್ಬಂಟಿಗ, ಬೆಳೆದ ಈ ಹೆಣಮಗಳು ನಿನ್ನ ಕಾಗದಾನ, ಅಡುಗೆ ಮನೆಗೆತಂದುಕೊಡೋಕಾಗುತ್ಯೆ ? ರಾಮಾ ಶಾಸ್ತ್ರಿ, ಒಂದು ಕಪ್ಪು ಕಾಫಿ ಆಸೆಗೆ ಅಡುಗೆಮನೆಗೇ ಬರೋನು. ಅಪ್ಪ್ಯಾಕೆ ಈ ದಿನ ಪತ್ರಿಕೆ ಮಾರೋ ಹುಡುಗರೂ, ಪೇಪರನ್ನ ಹೊರಗಿನಿಂದ ಎಸೆದೇ ಹೋಗ್ತಾರೆ. ಅದು ನೀರಿನಾಗ್ಯಾದ್ರೂ ಬೀಳ್ಲಿ, ಕೊಚ್ಚೆಗಾರ. ಬೀಳಲಿ, ಅದು ಅವರ ಜವಾಬ್ದಾರಿ ಅಲ್ಲವಂತೆ. ನಾನು ಪೇಪರನ್ನ,ಬಾಗಿಲು ಒಳಗಾದ್ರೂ ಹಾಕಯ್ಯ ಅಂದಾಗ 'ನಮಗೆ ಅದಕ್ಕೆಲ್ಲಾ ಟೈಮಿಲ್ಲ ಅಂತಾನಲ್ಲ ಆ ಪೋರ. ಹ್ಯಾಂಗದೆ, ದುಡ್ಡು ಕೊಟ್ಟು, ಈ ಫಜೀತಿ ಅನುಭವಿಸೋದ್ದು ನಮ್ಮ ಕರ್ಮ"

"ಏನೇ ಹೇಳಿ ಸ್ವಾಮಿ, ಇವಳು ಸಿಂಗ್ರಾಚಾರ್ಯರ ಮನೆಗೆ ಎಸೆದ ನನ್ನ ಕಾಗದ ಗಳನ್ನ, ಪಾಪ ಅವರು ದಿನ ಬೆಳಗಾದರೆ ಬಂದು ನನಗೆ ತಲುಪಿಸ್ತಾರಲ್ಲಾ, ಅವರಿಗೇನು ಕರ್ಮ ಹೇಳಿ? ಅವರೇನು ಪೋಸ್ಟುಮ್ಯಾನೇ?" ಗುಂಡಪ್ಪ ಕಳಕಳಿಯಿಂದ ಹೇಳಿದ.

"ಇದಕ್ಕೆಲ್ಲಾ ಒಂದು ಪರಿಹಾರಯಿದೆ. ಆದ್ರೆ ನೀನು ಮನಸ್ಸು ಮಾಡಬೇಕು," ಎಂದು ವೇ॥ ಬ್ರಂ॥ ದೇಶಾವರಿ ನಗೆ ನಕ್ಕಾಗ "ಪರಿಹಾರ ಇದೇ ಅಂತೀರಾ ? ಏನದು ?" ಗುಂಡ ಕಾತರತೆಯಿಂದ ಕೇಳಿದ.

"ನೋಡು ಗುಂಡಪ್ಪಾ, ನೀನೂ ಬ್ರಹ್ಮಚಾರಿ, ಒಬ್ಬಂಟಿಗ. ಆ ಪೋಸ್ಟು ಹುಡುಗೀಗೂ ಮದುವೆಯಾಗಿಲ್ಲ. ನೀವಿಬ್ರೂ ಮದುವೆ ಆಗ್ಬಿಟ್ರೆ, ನಿನ್ನ ಪತ್ರ

ಗಳೆಲ್ಲಾ, ವಿಳಾಸಯಿಲ್ಲದೇನೆ, ಖಾತ್ರಿಯಾಗಿ ನಿನ್ನ ಬೆಡ್‌ರೂಂಗೇ ತಲುಪುತ್ತೆ ಅಂತ ನಮ್ಮ ಅಂಬೋಣ. ನೀನೇನಂತಿ ?" ಎಂದು ಕೃಷ್ಣಾಚಾರ್ರು ಅಪ್ಪಣೆ ಕೊಡಿಸಿದಾಗ, ಗುಂಡಪ್ಪ ಮುಗುಮ್ಮಾಗಿ ತಲೆಯಾಡಿಸಿದ.

ವೇ॥ ಬ್ರಂ॥ ಕೃಷ್ಣಾಚಾರ್ರ ಪರಿಶ್ರಮದಿಂದ ಗುಂಡಪ್ಪನಿಗೂ, ಆ ಪೋಸ್ಟ್ ಪೇದೆಯ ಮಗಳು ಶಾರದೆಗೂ ಪರಿಪಾಯು ಪ್ರೇರಣೆಯಿಂದ, ಮದುವೆ ಆಗಿಯೇ ಹೋಯಿತು. ಬ್ರಹ್ಮಚಾರಿ, ಆಂಜನೇಯ ಔಪಾಸಕ, ಗುಂಡಪ್ಪ ಗೃಹಸ್ಥನಾದ.

ತಿಂಗಳುಗಳುರಳಿ, ವರ್ಷಗಳು ಬಂದಾಗ, ಕೃಷ್ಣಾಚಾರ್ರು ಗುಂಡಪ್ಪನನ್ನು ಮೊಖಾ ಭೇಟಿಯಾದರು. ಆಗ ಅವರು ಕೇಳಿದ ಮೊದಲ ಪ್ರಶ್ನೆ "ಏನಪ್ಪಾ, ನಿನ್ನ ಪತ್ರಗಳೆಲ್ಲಾ ಸರಿಯಾಗಿ ಮುಟ್ತಾಯಿದೆ ತಾನೆ ? ನಂಬರಿನ ಹಾವಳಿ ಇಲ್ಲಾಂತಾತು" ಎಂದು ನಗೆಯಾಡಿದಾಗ, ಗುಂಡಪ್ಪ ಮುಖ ಗಂಟು ಹಾಕಿದ.

"ಪತ್ರಗಳೇನೋ ನನ್ನ ಬೆಡ್‌ರೂಂ ಮುಟ್ತಿದೆ. ಆದರೆ, ನಂಬರುಗಳ ಹಾವಳಿ, ನನ್ನ ಸಂಸಾರದಲ್ಲೂ ಇಣುಕಿದೆ," ಎಂದ ಗುಂಡಪ್ಪ. ಅರ್ಥವಾಗದೆ ಪ್ರಶ್ನಾರ್ಥಕವಾಗಿ ಅವನನ್ನೇ ನೋಡಿದರು ವೇದಬ್ರಹ್ಮರು.

"ನೋಡಿ ಆಚಾರ್ರೇ, ಇವಳು ಈಗ ಪ್ರತಿಯೊಂದು ಡಬ್ಬದ ಮೇಲೂ ಒಂದೊಂದು ನಂಬರು ಬರದು ಅಂಟಿಸಿದ್ದಾಳೆ. ಅಕ್ಕಿ, ಬೇಳೆ, ಉಪ್ಪು, ಸಕ್ಕರೆ, ಎಲ್ಲಾದಕ್ಕೂ ಒಂದೊಂದು ನಂಬರ್ರು. ಅಕ್ಕಿಗೆ ಒಂದು, ಬೇಳೆಗೆ ಎರಡು, ಉಪ್ಪಿಗೆ ಮೂರು, ಸಕ್ಕರೆಗೆ ನಾಲ್ಕು, ಹೀಗೆ ಜೀರಿಗೆ, ಸಾಸಿವೆ, ಎಲ್ಲಾದಕ್ಕೂ ನಂಬರುಗಳು. ಇವಳು ಅಡುಗೆ ಮಾಡಿ- ಆಫೀಸಿಗೆ ಹೋಗೋ ಅರ್ಜಂಟು. ಅದಕ್ಕೇ ಈ ಅರೇಂಜ್‌ಮೆಂಟು.

"ಭೋ ಚನ್ನಾಗಿದ್ಯಲ್ಲಾ ಗುಂಡಪ್ಪಾ" ಕೃಷ್ಣಾಚಾರ್ರು ಕಿವಿಯಿಂದ, ಕಿವಿಯ ತನಕ ಹಲ್ಲು ಕಿರಿದರು. "ಏನು ಚನ್ನಾಗಿದೆ ಸ್ವಾಮಿ, ನನ್ನ ಕರ್ಮ. ಈ ಹಾಳು ಅಡಲ್ಟರೇಟೆಡ್, ಗೋಂದುಗಳು ಸಿಕ್ಕೋ ಈ ಕಾಲದಲ್ಲಿ, ಡಬ್ಬಗಳ ಮೇಲೆ ಅಂಟಿಸಿದ ನಂಬರುಗಳು. ಸರಿಯಾಗಿ ಅಂಟಿಕೊಳ್ಳುವೆಯೋ ?"

"ಗಂಡ, ಹೆಂಡಿರ ಸಂಸಾರವೇ ಸರಿಯಾಗಿ ಅಂಟಿಕೊಳ್ಳದೇ ಇರೋವಾಗ, ಇನ್ನು ಗೋಂದು ಅಂಟದೇ ಇರೋದು ಯಃಕಶ್ಚಿತ್ ವಿಷಯ ಅನ್ನೋದು ನಮ್ಮ ಅಂಬೋಣ" ಎಂದು ವೇ॥ ಬ್ರಂ॥ಹರು ಮಧ್ಯದಲ್ಲಿಯೇ ಅಪ್ಪಣೆ ಕೊಡಿಸಿದರು

"ಕೆಳಕ್ಕೆ ಬಿದ್ದಿದ್ದ ನಂಬರಿನ ಚೀಟಿಗಳನ್ನು ತಿರುಗಿ, ಅಂಟಿಸಿದಾಗ ಅದಲು ಬದಲಾಗಿರಬೇಕು. ಮೂರನೇ ನಂಬರು, ನಾಲ್ಕನೇ ನಂಬರ್ ಡಬ್ಬದ ಮೇಲೆ,

ನಾಲ್ಕನೇ ನಂಬರ್ರು, ಮೂರನೇ ನಂಬರ್ ಡಬ್ಬದ ಮೇಲೆ ಅಂಟಿಸಿರಬೇಕು. ಅದಕ್ಕೇ ಅವತ್ತು ನಾನು ಉಪ್ಪಿನ ಕಾಫಿ ಕುಡಿಯುವ ಪರಿಸ್ಥಿತಿ ಏರ್ಪಟ್ಟಿತು, ಆಚಾರ್ರೆ.... ಎಂದು ಅಲವತ್ತುಕೊಂಡ ಗುಂಡಪ್ಪ.

"ಧಿವನಾಗಿ, ಅಕ್ಕಿ, ಬೇಳೆ, ರಾಗಿ, ಅಂತ ಆಯಾಯ ಪದಾರ್ಥಗಳ ಡಬ್ಬಗಳ ಮೇಲೆ, ಅಂಟಿಸಿದರೆ, ಇವಳ ಗಂಟೇನು ಹೋಗುತ್ತೆ ಸ್ವಾಮಿ? ನಂಬರು ಅಂಟಿಸಿದ್ರೆ ಯಾರಿಗೆ ತಾನೇ ಜ್ಞಾಪಕ ಇರುತ್ತೆ. ಇವಳು ಕಾಫಿ ಪುಡಿ ತನ್ನಿ ಅಂದಾಗ, ನಾನು ಕ್ಯಾಟಲಾಗ್‌ನಲ್ಲಿ, ಸಕ್ರಮವಾಗಿ, ಬರೆದಿರುವ, ನಂಬರನ್ನು ನೋಡಿ, ಪತ್ತೆ ಹಚ್ಚಿ, ಕಾಫಿ ಪುಡಿ ನಂಬರನ್ನು ಕಂಡುಹಿಡಿದು, ಇವಳಿಗೆ ಅದನ್ನು ತಂದುಕೊಡೋ ಹೊತ್ತಿಗೆ, ಟೈಂ ಆಗೂಲ್ವೇ ಹೇಳಿ ಆಚಾರ್ರೇ...." ಗುಂಡನ ಉದ್ರೇಕದ ಪ್ರಶ್ನೆಗೆ, ಅವರ ಮದುವೆ ಕೂಡಿಸಿದ ವೇ॥ ಬ್ರಂ॥ ಕೃಷ್ಣಾಚಾರ್ರು, ಸಾಂತ್ವನದ ನುಡಿಗಳಿಗಾಗಿ ತಡ ಕಾಡುತ್ತಿದ್ದರು. "ಯಾಕೆ ಬಂತೋ ನಮ್ಮ ದೇಶಕ್ಕೆ ಈ ಕಂಪ್ಯೂಟರುಗಳು. ಅದರಿಂದ ಪ್ರಚೋದಿತವಾದ ಈ ನಂಬರುಗಳ ಹಾವಳಿ?" ಕೃಷ್ಣಾಚಾರ್ರಿಗೆ ಸಮಸೆ ಕ್ಲಿಷ್ಟವಾಗಿ ಕಾಣಿಸಿತು. ಮತ್ತೊಂದು ಉಂಡೆ ನಶ್ಯವನ್ನು ನಾಸಿಕಕ್ಕೇರಿಸಿದರು ವೇದಬ್ರಹ್ಮರು.

ಹಾದಿಯಲ್ಲಿ ಕೇಳಿಸಿದ್ದು ;

ಏನು ರಾಯರೇ, ಬೆಲೆಗಳೆಲ್ಲಾ ಹೀಗೆ ಗಗನಕ್ಕೆ ಏರಿ ಬಿಟ್ಟಿವೆ! ಮೊನ್ನೆ ಒಂದು ರೂಪಾಯಿಗೆ ಆಲೂಗೆಡ್ಡೆ ಕೊಡಪ್ಪ ಅಂದ್ರೆ ಚಾಕು ತೆಗೆದ. ತಿವಿದೇ ಬಿಡ್ತಾನೇನೋ ಅಂತ ಗಾಭರಿ ಆದೆ. ಆದ್ರೆ ಅವನು ಒಂದು ಆಲೂಗೆಡ್ಡೆನ ಅರ್ಧ ಭಾಗ ಮಾಡಿ ತೊಗೊಳ್ಳಿ ಸ್ವಾಮಿ ನನ್ನ ನನ್ನ ಪರಟಿನ ಜೇಬಿಗೆ ತುರುಕಿ ಬಿಟ್ನಲ್ಲಾರೀ !"

"ಅಯ್ಯೋ ಸ್ವಾಮಿ, ನೀವೇ ವಾಸಿ. ನನ್ಕಥೆ ಕೇಳಿ. ಮೋಪೆಡ್ ಪೆಟ್ರೋಲ್ ಆಗ್ಹೋಯ್ತು. ಪೆಟ್ರೋಲ್ ಬಂಕ್‌ಗೆ ನೂಕ್ಕೊಂಡು ಹೋದೆ. ಜೇಬಿನಲ್ಲಿ ಇದ್ದದ್ದು ಒಂದೇ ರೂಪಾಯಿ. ಒಂದು ರೂಪಾಯಿಗೆ ಪೆಟ್ರೋಲ್ ಹಾಕಪ್ಪಾ ಅಂದ್ರೆ, ನನ್ನ ಎಡಗೈ ಎಳೆದು ಮುಂಗೈ ಮೇಲೆ ಅತ್ತರ್ ಹಚ್ತಾರಲ್ಲಾ ಹಾಗೆ ಎರಡು ಹನಿ ಪೆಟ್ರೋಲ್ ಹಚ್ಚಿ, ರೂಪಾಯಿ ಕಿತ್ಕೊಂಡಾರೀ"

ಕಾಷ್ಟಮುಂಡುವಿನಲ್ಲಿ ಕೆಲವು ದಿನ....

ಪ್ರತಾಪ್

ನಾವಿದ್ದ ಹೋಟಲಿನ ಪಕ್ಕದಲ್ಲೇ ಒಂದು ಸಣ್ಣ ಭವನ. ಅದರ ಬಾಗಿಲು (ಆಸ್ಪತ್ರೆ ಬಾಗಿಲಿನಂತೆ) ಸದಾ ತೆಗೆದೇ ಇತ್ತು. ಜನ ಸಾಲಾಗಿ ಹೋಗಿ ಬರುತ್ತಲೇ ಇದ್ದರು ಇದೇನು ವಿಚಿತ್ರ ಅಂತ ಬಾಗಿಲ ಹತ್ರ ಇದ್ದೋನ್ನ ಕೇಳಿದೆ. ಅವನು ಅದೇ ಕೆಸೀನೋ ಅಂತ ನಕ್ಕ. ಇದೇನು ನೋಡೇ ಬಿಡೋಣ ಅಂತ ಒಳಕ್ಕೆ ಕಾಲಿಟ್ಟೆವು. ಒಳಗೆ ಒಂದು ಭಾರೀ ಹಾಲ್‌ನಲ್ಲಿ ಸುಮಾರು 20-25 ಜ್ಯಾಕ್‌ಪಾಟ್ ಯಂತ್ರಗಳು. ಅದಕ್ಕೆ ನಂ ದೇಶದ ನಾಣ್ಯ ಆಗೋಲ್ಲ. ದುಡ್ಡು ಕೊಟ್ಟರೆ ಆ ಯಂತ್ರಕ್ಕೆ ಹಾಕೋ ನಾಣ್ಯಗಳು ಅಲ್ಲೇ ಸಿಗುತ್ತವೆ. ನಾಣ್ಯ ಹಾಕೋದು, ಹ್ಯಾಂಡ್ಲ್ ಎಳೆಯೋದು, ಏನೂ ನಾಣ್ಯ ಬೀಳದೇ ಇದ್ದರೆ ಪೆಚ್ಚು ಮುಖ ಹಾಕ್ಕೊಳ್ಳೋದು, ಇದೇ ಸೈಕಲ್ ಅಲ್ಲಿ ಸತತವಾಗಿ ನಡೆಯುತ್ತೆ. ಎಲ್ಲೋ ಒಬ್ಬಿಬ್ಬರಿಗೆ ಇದ್ದಕ್ಕಿದ್ದಂತೆ ನಾಣ್ಯಗಳ ಸುರಿಮಳೆ ಆಗ್ತಾ ಇತ್ತು. ಮಿಕ್ಕವರೆಲ್ಲ ಬಕರಗಳಂತೆ ಅದನ್ನೇ ನೋಡ್ತಾ ನಿಂತಿರ್‍ತಿದ್ರು! ಈ ಕೆಸೀನೋ ಕೆಳಗಡೆ ಹಂತದಲ್ಲಿ ಇನ್ನೊಂದು ಹಾಲ್. ಅಲ್ಲಿ ರೂಲೆ ಆಟ. ರೂಲೆ ಟೇಬಲ್ ಸುತ್ತ ಜನ ಇದ್ದೇ ಇರ್ತಾರೆ. ಅಲ್ಲಿ ಸಿಬ್ಬಂದಿ ಮಾತ್ರ ಬಹಳ ಚುರುಕು. ಮಧ್ಯದಲ್ಲಿ ಒಂದು ಚಕ್ರ. ಆ ಚಕ್ರದಲ್ಲಿ ಒಂದು ಸಣ್ಣ ಗೋಲೀನ ಕೈಯಿಂದ ತಿರುಗಿ ಬಿಡ್ತಾನೆ. ಚಕ್ರ ಜೋರಾಗಿ ತಿರುಗಿ ನಿಂತಾಗ, ಆ ಗೋಲಿ ಯಾವ ನಂಬರ್‌ಗೆ ಒಲಿಯುತ್ತೋ, ಆ ನಂಬರ್ ಮೇಲೆ ನಿಮ್ಮ ಬೆಟ್ ಇದ್ರೆ ನಿಂ ಲಕ್ಕು! ಇಲ್ದಿದ್ರೆ ಯಥಾ ಪ್ರಕಾರ ಪೆಚ್ಚು ಮುಖ! ಭಾರತ ಒಂದೇ ಅಲ್ಲ. ಇತರ ದೇಶಗಳ ಭಾರೀ ವರ್ತಕರು ಇತ್ಯಾದಿ (ಕಪ್ಪು ಹಣ ಹೇರಳವಾಗಿ ಇರೋರು) ಅಲ್ಲಿ ಸಾವಿರಾರು ರೂಪಾಯಿ ಸುರೀತಾ ಇದ್ರು. ನಾನೂ ಬಾಯಿ ಬಿಟ್ಕೊಂಡು ನೋಡ್ತಿದ್ದೆ. ಸಂಜೆ ಆಯ್ತು ಅಂದ್ರೆ ಸರಿ, ಇತರ ಹೋಟಲುಗಳಿಂದ ಬಸ್ಸುಗಳ ಸಾಲು ಬರ್‍ತಾ ಇತ್ತು. ಭಾರೀ ಸಂಖ್ಯೆಯಲ್ಲಿ ಜನ (ಬಹಳ ಜನ ಭಾರತೀಯರೇ ಅನ್ನಿ) ಕೆಸೀನೋ ನೋಡುಕ್ಕೆ ಬರ್‍ತಾ ಇದ್ರು. ಬಡ ಭಾರತದಲ್ಲಿ ಕೆಸೀನೋ ನೋಡಿಲ್ದೆ ಇರೋರಿಗೆ ಇದೊಂದು ನೂತನ ಅನುಭವ.

ನೇಪಾಲದಲ್ಲಿ ನೋಡಲೇಬೇಕು ಅಂದ್ರೆ, ಅಲ್ಲಿನ ಏರ್‌ಲೈನ್ಸ್‌ನೋರು ಏರ್ಪ ಡಿಸಿರೋ ಮೌಂಟನ್ ಫ್ಲೈಟ್. ಅದರಲ್ಲಿ ಹಿಮಾಲಯದ ಹಲವಾರು ಶಿಖರಗಳನ್ನ ಸಾಲಾಗಿ ತೋರಿಸ್ತಾರೆ. ಬಹಳ ರಮ್ಯವಾದ ದೃಶ್ಯಗಳು. ಪೈಲಟ್ ಆ ಎವರೆಸ್ಟ್ ದೂರದಲ್ಲಿ ತೋರಿಸಿದಾಗ, ಅದರ ಮೇಲೆ ಹತ್ತಿದ ಟೆನ್‌ಸಿಂಗ್ ಮತ್ತು ಹಿಲರಿ ಅವರ ಜ್ಞಾಪಕ ಬಂದು ಮೈ ನಡುಗಿತು.

ಕಟಮಂಡುಗೆ ಸುಮಾರು ನಾಲ್ಕು ಗಂಟೆ ದೂರದಲ್ಲಿ ಪೋಕ್ರ ಅಂತ ಅಂದದ ಊರಿದೆ. ಅಲ್ಲಿಗೆ ಹೋಗೋದು ಸ್ವಲ್ಪ ತ್ರಾಸ! ರಸ್ತೆ ರಿಪೇರಿ ಕಾರ್ಯ ನಾಲ್ಕು ವರ್ಷದಿಂದ ನಡೀತಿದೆಯಂತೆ. ಜಲ್ಲೀ ಕಲ್ಲಿನ ಮೇಲೆ ನಮ್ಮನ್ನೆಲ್ಲ ಕುಲುಕಿಸ್ತಾ ಜೀಪ್ ನಲ್ಲಿ ಪ್ರಯಾಣ! ಬೆಂಗಳೂರಿನ ರಸ್ತೆಗಳು ನೆನಪಿಗೆ ಬಂದವು.. ಪೋಕ್ರದಲ್ಲಿ ದೊಡ್ಡ ಸರೋವರ. ನಂ ಹೋಟಲ್ ಸೇರುಕ್ಕೆ ಅದನ್ನ ಒಂದು ತೆಪ್ಪದಲ್ಲಿ ದಾಟ ಬೇಕು. ಶಾಂತವಾದ ವಾತಾವರಣ, ನಗೆ ಮೊಗದ ವೇಯ್ಟರ್‌ಗಳು, ದೊಡ್ಡ ಸರೋವರದಲ್ಲಿ ಪ್ರಶಾಂತ ಬೋಟಿಂಗ್. ಎರಡು ದಿನ ಕಳೆದದ್ದೇ ಗೊತ್ತಾಗಲಿಲ್ಲ.

ಪ್ರವಾಸಿಗಳನ್ನೆಲ್ಲ ಕಟಮಂಡುನಲ್ಲಿ ಪಶುಪತಿನಾಥ ದೇವಸ್ಥಾನಕ್ಕೆ ಮರೀದೆ ಕರಕೊಂಡು ಹೋಗುತ್ತಾರೆ. ಅದರ ಹೊರಗೇ ಚಿತಾಗಾರ. ನಂ ಗೈಡು ಮೂರು ಮೂರು ಜಾಗ ತೋರಿಸಿ, ಇದು ಮೂರು ಬೇರೆ ಜಾಗಗಳು, ಲೋಯರ್ ಕಾಸ್ಟ್, ಮಿಡಲ್ ಹಾಗೂ ಅಪ್ಪರ್ ಕಾಸ್ಟ್‌ನವರ ಅನುಕೂಲಕ್ಕೆ ಅಂತ ವಿವರಿಸಿದ. ನನಗೆ ಸೋಜಿಗ ಆಯ್ತು. ಅಲ್ಲಿ ಸ್ವರ್ಗಕ್ಕೆ ಹೋಗುವಾಗ ಆತ್ಮಗಳಿಗೂ ಬೇರೆ ಬೇರೆ ಏರ್ ಕಾರಿಡಾರ್‌ಗಳಿರುತ್ತವೆಯೇ? ಅಂತ. ನನ್ನ ಸಂಶಯಾನ ನನ್ನಲ್ಲೇ ಇಟ್ಕೊಂಡೆ.

ನೇಪಾಳದ ರಾಜನ ಅರಮನೇನ ನೋಡೋಣ ಅಂತ ಹೋದೆವು. ರಾಜ ಬೀರೇಂದ್ರ, ಯಾರಾದರೂ ಕಲ್ಲು ಬೀರಾರು ಅಂತ ಸುತ್ತ ದೊಡ್ಡ ಗೋಡೆ ಕಟ್ಟಿ ಬಿಟ್ಟಿದಾನೆ. ಮುಖ್ಯ ಗೇಟಿನಿಂದ ಮಾತ್ರ ಅರಮನೆ ಕಾಣುತ್ತೆ. ಅದನ್ನ ನೋಡಿ ಮೈಸೂರರಸರ ಗತ ವೈಭವ ಜ್ಞಾಪಕಕ್ಕೆ ಬಂತು.

ಸರಿ, ಜೇಬು ಖಾಲಿ ಆಗ್ತಾ ಬಂತು. ವಾಪಸ್ ಕಲ್ಕತ್ತಾಗೆ ಬಂದೆವು. ಅಲ್ಲಿ ಏರ್‌ಪೋರ್ಟ್‌ನಲ್ಲಿ ಜನಜಂಗುಳಿ, ಕಸ್ಟಂಸ್ ತಗಾದೆ, ಯಥಾಪ್ರಕಾರ. ನಂ ಹತ್ರ, ನೇಪಾಳದ ಹಸಿರು ನೆನಪುಗಳನ್ನ ಬಿಟ್ರೆ ಬೆಲೆ ಬಾಳೋದು ಏನೂ ಇರಲಿಲ್ಲ; ಧೈರ್ಯ ವಾಗಿ ಹಸಿರು ದಾರೀಲೆ ನಡೆದೆವು.

ನಮ್ಮ ರಸ್ತೆಗಳ ದುರವಸ್ಥೆ

ಶಾಂತಾ ರಘು

"ಅಮೆರಿಕದಲ್ಲಿ ಎಲ್ಲದಕ್ಕಿಂತ ನಂಗೆ ಅತ್ಯಂತ ಮೆಚ್ಚಿಗೆಯಾಗಿದ್ದು ಅಲ್ಲಿನ ರಸ್ತೆಗಳೇ! ಎಷ್ಟು ಚೆನ್ನಾಗಿ Maintain ಮಾಡಿದಾರೆ! ಏನು Traffic control! ಇಲ್ಲಿ ಒಂದ್ಸರಿ ಜಯನಗರದಿಂದ ಮಲ್ಲೇಶ್ವರಕ್ಕೆ ಡ್ರೈವ್ ಮಾಡಿ ಬಂದ್ರೆ, ದಿನವೆಲ್ಲಾ ಸುಧಾರಿಸ್ಕೋಬೇಕು !– –" ಅಂತ ಗೆಳತಿಯರಿಗೆ ಹೇಳ್ತಾ ಇದ್ದೆ.

"ಸಾಕ್ ಸಾಕೇ! ಅತಿಯಾಯ್ತು ನಿಂದು! ಅಮೆರಿಕಾಗೆ ಹೋಗಿ ಬಂದೋರ್ಗೆಲ್ಲಾ ಇದೇ ಚಾಳಿ! ಸುಮ್ನೆ ಅಲ್ಲೀದನ್ನೇ ಹೊಗಳೋದು! ಏನಾಗಿದೆ ನಮ್ಮ ರಸ್ತೆಗಳು? – –" ಅಂತ ರಮಾ ಬಯ್ದಳು.

ನಿಟ್ಟುಸಿರಿಟ್ಟೆ. ಏನ್ಮಾಡೋದು? "ಇದ್ದದ್ದು ಇದ್ದ ಹಾಗೆ ಹೇಳಿದ್ರೆ, ಎದ್ದು ಒಂದು ಎದೇಗೆ ಒದ್ರಂತೆ!" ಬೇರೆಯವರ ಒಳ್ಳೆಯ ಗುಣಗಳನ್ನು ಒಪ್ಕೊಳ್ಳೋದ್ರಲ್ಲಿ ಏನಿದೆ ಅವಮಾನ?

ಹೋದ ಆಗಸ್ಟ್‌ನಲ್ಲಿ ಲಾಸ್ ಏಂಜಲಿಸ್‌ನಲ್ಲಿ ಹೋಗಿಳಿದು, Airportನಿಂದ ಹೊರಗೆ ಬಂದು—ಪ್ರಯಾಣದ ಸುಸ್ತನ್ನೂ ಮರೆತು ಆನಂದದಿಂದ, ಅಚ್ಚರಿಯಿಂದ ನಿಂತು ಬಿಟ್ಟೆ! ಆಹಾ! ಎಂತಹ ರಸ್ತೆಗಳು! ಅ–ಗ–ಲ–ವಾಗಿ, ನುಣ್ಣಗೆ ಹೊಳೆಯುತ್ತಿದ್ದ ರೋಡುಗಳು! ಹಾಯಾಗಿ ಅವುಗಳ ಮೇಲೆ ಹರಿದಾಡುತ್ತಿದ್ದ ದೊಡ್ಡ ಅಮೆರಿಕನ್ ಕಾರುಗಳು!

ಮದರಾಸಿನಲ್ಲಿ ನನ್ನ ತಮ್ಮನ ಮನೆಯಿಂದ Airportಗೆ ಹೋಗುವಷ್ಟರಲ್ಲಿ, ನಮ್ಮ ಕಾರು ಹಳ್ಳ, ದಿಣ್ಣೆಗಳಲ್ಲಿ ಹತ್ತಿ, ಇಳಿದು, ಕುಣಿದು ಕುಪ್ಪಳಿಸಿ, ಅಡ್ಡಾದಿಡ್ಡಿ Trafficನಲ್ಲಿ ಸಿಕ್ಕಿ, ಇಲ್ಲದ ಸರ್ಕಸ್ಸೆಲ್ಲಾ ಮಾಡಿ, ನುಜ್ಜುಗುಜ್ಜಾಗಿ, ಒಂದು ಯಾಗವೇ ಮಾಡಿದಷ್ಟು ಶ್ರಮ ಪಟ್ಟಿದ್ದು ನೆನಪಿನಲ್ಲಿ Fresh ಆಗಿತ್ತು!

ಅಮೆರಿಕದಲ್ಲಿ ಮುಕ್ಕಾಲು ಪಾಲು ಎಲ್ಲ ಕಡೆ One way traffic. ನಾಲ್ಕರಿಂದ ಆರು ಲೇನುಗಳು. Overtake ಅನ್ನುವ ಮಾತೇ ಇಲ್ಲ. ಯಾರೂ ಹಾರನ್ನು

ಹೊಡೆಯುವುದೇ ಇಲ್ಲ. ಅವರವರ Laneಗಳಲ್ಲಿ ನೆಮ್ಮದಿಯಾಗಿ 80 ಮೈಲಿ ಸ್ಪೀಡಿನಲ್ಲಿ ಹೋಗ್ತಾ ಇರಬಹುದು. ಅಲ್ಲಿ ಇನ್ನೂ ಗ್ಯಾಲನ್, ಮೈಲುಗಳ ಯುಗದಲ್ಲೇ ಇದ್ದಾರೆ. ಪೆಟ್ರೋಲ್‌ಗೆ ಗ್ಯಾಸ್ ಅಂತಾರೆ. ಡ್ರೈವ್ ಮಾಡುವುದ ಆನಂದದ ಅನುಭವ ಅಲ್ಲಿ.

ಇಡೀ ಅಮೆರಿಕದಲ್ಲೇ ಲಾಸ್ ಏಂಜಲಿಸ್‌ನಲ್ಲಿ ಅತ್ಯಧಿಕ ಕಾರುಗಳು. ಅವುಗಳನ್ನು ಪಾರ್ಕ್ ಮಾಡೋಕೇ ಎಲ್ಲೂ ಜಾಗವಿಲ್ಲ. ಮುಕ್ಕಾಲು ಪಾಲು ರಸ್ತೆಗಳ ಎರಡೂ ಪಕ್ಕ ಒತ್ತಾಗಿ Nose to tail ಕಾರುಗಳನ್ನ ಪಾರ್ಕ್ ಮಾಡಿರ್ತಾರೆ. ಈ ಸಮಸ್ಯೆಗೆ ಸರ್ಕಾರ ಒಂದು ಪರಿಹಾರ ಹೇಳಿತು.

"ದಯವಿಟ್ಟು ಒಂದು ಕಾರಿನಲ್ಲಿ ಒಬ್ಬರು ಹೋಗಬೇಡಿ. ಇಬ್ಬರಾದ್ರೂ ಒಂದು ಕಾರನ್ನು ಹಂಚಿಕೊಳ್ಳಿ" ಅಂತ. ಇದಕ್ಕೆ Car pool ಅಂತ ಹೆಸರು. ಎಡಗಡೆ ಪ್ರತ್ಯೇಕ Lane ಇರತ್ತೆ. Car poolನವರು ಈ ಲೇನಿನಲ್ಲಿ Extra speedನಲ್ಲಿ ಹೋಗಬಹುದು. ಕೆಲವರು ಜಾಣರು ಈ ಸೌಕರ್ಯವನ್ನು ದುರುಪಯೋಗಪಡಿಸಿಕೊಳ್ತಾರೆ.. ಸೂಪರ್ ಸ್ಪೀಡಿನಲ್ಲಿ ಹೋಗಲು, Life size ಡಮ್ಮಿಗಳನ್ನು ಪಕ್ಕದಲ್ಲಿ ಕೂಡಿಸಿಕೊಂಡು, Car poolನ ಲೇನಿನಲ್ಲಿ ಜೆಟ್ ವೇಗದಲ್ಲಿ ಹೋಗ್ತಾ ಇರ್ತಾರೆ। L. A. ಟ್ರಾಫಿಕ್ ಪೋಲೀಸ್ ಭಯಂಕರ ಕಾರ್ಯಪಟುಗಳು. ಬಲು ಬೇಗನೇ ಈ ಡಮ್ಮಿವಾಲಾಗಳನ್ನ ಹಿಡಿದು, ಯದ್ವಾ ತದ್ವಾ Fine ಹೇರ್ತಾ ಇರ್ತಾರೆ!

ಲಾಸ್ ಏಂಜಲಿಸ್ Freeways ಮತ್ತು Highwaysಗಳಲ್ಲಿ 24 ಗಂಟೆಗಳೂ ಸಾವಿರಾರು ಕಾರುಗಳು ಎಡೆಬಿಡದೆ ಹರಿಯುತ್ತಲೇ ಇರುತ್ತವೆ. ಈ ಟ್ರಾಫಿಕ್ ಅನ್ನು ಕಂಟ್ರೋಲ್ ಮಾಡುವ ವಿಧವೋ ಅದ್ಭುತ. ಹೆಲಿಕಾಪ್ಟರುಗಳಲ್ಲಿ ಹಾರಾಡುತ್ತ ಟ್ರಾಫಿಕ್ ನಿಯಂತ್ರಣ ಮಾಡ್ತಾ ಇರ್ತಾರೆ. ಟಿ.ವಿ.ಯಲ್ಲಿ ಪ್ರತ್ಯೇಕ ಚಾನೆಲ್‌ನಲ್ಲಿ ವಾಹನಗಳಿಗೆ ಎಡೆಬಿಡದೆ ಮಾರ್ಗದರ್ಶನ ಮಾಡ್ತಾ ಇರ್ತಾರೆ, ನೀವೀಗ ಯಾವ Boulevardನಲ್ಲಿರುವಿರಿ, ಮುಂದೆ ಯಾವ ಯಾವ ರಸ್ತೆಗಳು ಬರುತ್ವೆ, ಹೀಗೆ.

ಇದಲ್ಲದೆ ನೂರಾರು Cop ಕಾರುಗಳೂ, ಮೋಟಾರ್ ಬೈಕುಗಳೂ, ಗಸ್ತು ಹೊಡೆಯುತ್ತಲೇ ಇರತ್ವೆ. ಅವು ಯಾವಾಗ, ಎಲ್ಲಿಂದ ಪ್ರತ್ಯಕ್ಷವಾಗುತ್ವೇಂತ ಹೇಳೋದೇ ಕಷ್ಟ. ಅಪ್ಪಿ ತಪ್ಪಿ ವೇಗ ಮಿತಿ ಮೀರಿದಿರೋ, ಯಾವುದೋ ಮಾಯೆಯಲ್ಲಿ ಧಿಡೀರನೆ ಹಾಜರಾಗಿ, ನಿಮ್ಮನ್ನು ಅಟ್ಟಿ, ಪಕ್ಕಕ್ಕೆ ನಿಲ್ಲಿಸಿ ಬಿಡ್ತಾರೆ. ಉಸಿರೆತ್ತುವ ಹಾಗೇ ಇಲ್ಲ. ಕೈಯಲ್ಲಿ ಟಿಕೆಟ್ ಕೊಟ್ಟು ಅದೃಶ್ಯರಾಗಿ ಬಿಡ್ತಾರೆ. ದೂರದಲ್ಲೆಲ್ಲೋ "ಊಂಯ್! ಊಂಯ್!" ಎಂದು ಟ್ರ್ಯಾಫಿಕ್ ಪೋಲೀಸ್ ಕಾರಿನ ಸೈರನ್

ಕೇಳಿತೋ, ಎಲ್ಲ ಕಾರುಗಳೂ ಥಟ್ಟನೆ ವೇಗ ಕಡಿಮೆ ಮಾಡಿ, ಸಾಧು ಪ್ರಾಣಿಗಳಂತೆ ಹೋಗುತ್ವೆ. ಲಾಸ್ ಏಂಜಲಿಸ್‌ನಲ್ಲಿ ಟ್ರಾಫಿಕ್ ವಿಧಿಗಳು ಬಲು ಕಟ್ಟುನಿಟ್ಟು.

ಟ್ರಕ್ಕುಗಳಿಗೆ ಬಲ ತುದಿಯಲ್ಲಿ ಪ್ರತ್ಯೇಕ Lane. ಆ ಟ್ರಕ್ಕುಗಳೋ ರಾಕ್ಷಸ ಪ್ರಮಾಣದವು. 20 ಅಡಿ ಎತ್ತರದಲ್ಲಿ ಡ್ರೈವರ್ ಮುಖ ಕಾಣತ್ತೆ! ಉದ್ದ 40, 50 ಅಡಿ ಇರತ್ತೆ. ಒಂದೇ ಟ್ರಕ್ಕು 30, 40 ಹೊಸ ಕಾರುಗಳನ್ನು ತುಂಬಿಕೊಂಡು ಊರಿಂದೂರಿಗೆ ಸಾಗಿಸುತ್ತೆ!

ಅಲ್ಲಲ್ಲೇ ವಿಶದವಾಗಿ ಟ್ರಾಫಿಕ್ Instructions. 100ರಿಂದ 200 ಅಡಿಗಳಿಗೊಮ್ಮೆ ಟೆಲಿಫೋನ್ ಬೂತ್‌ಗಳು. ನಮ್ಮ ಗೆಳೆಯರ ಕಾರು ಒಮ್ಮೆ Highwayಯಲ್ಲಿ ನಿಂತು ಹೋಯಿತು: ತಕ್ಷಣ ಫೋನ್ ಮಾಡಿದ್ರು. ಸ್ವಲ್ಪ ಹೊತ್ತಿನಲ್ಲಿ Pick up ಕಾರು ಬಂದು, ಅವರನ್ನೂ ಕರೆದುಕೊಂಡು, ಅವರ ಕಾರನ್ನೂ Tow ಮಾಡಿಕೊಂಡು ಹೋಯಿತು.

ಅಮೆರಿಕದಲ್ಲಿ ಆಕ್ಸಿಡೆಂಟುಗಳೇನಾದ್ರೂ ಆದರೆ ಭಯಂಕರ ಪ್ರಮಾಣದಲ್ಲೇ ಇರುತ್ವೆ—ಕಾರುಗಳ ವೇಗ 80, 90 ಮೈಲು ಇರೋದ್ರಿಂದ.

ಊರೊಳಗೆ ಎಲ್ಲೆಲ್ಲೂ ಪಾದಚಾರಿಗಳಿಗೆ Frist choice. ರೋಡು ಕ್ರಾಸ್ ಮಾಡುವಲ್ಲಿ ಪಕ್ಕದ ಕಂಬದಲ್ಲಿರುವ ಬಟನ್ ಒತ್ತಿದರೆ, "Walk" ಅಂತ ಚಿಹ್ನೆ ಬಂದ ಕೂಡಲೇ Cross ಮಾಡಬೇಕು.

ಹೀಗೆ ಒಂದು ದಿನ ವಾಕಿಂಗ್ ಹೋಗ್ತಾ ಇದ್ದಾಗ, ಕ್ರಾಸಿಂಗ್ ಇಲ್ಲದ ಕಡೆ ಕ್ರಾಸ್ ಮಾಡಬೇಕಾಗಿ ಬಂತು. ಅನುಮಾನದಿಂದ ನಿಂತಿದ್ವಿ ಶರವೇಗದಲ್ಲಿ ಬರ್ತಾ ಇದ್ದ ಡಜನ್‌ಗಟ್ಲೆ ಕಾರುಗಳು 'ಸರ್, ಸರ್' ಎಂದು ನಮ್ಮ ಮುಂದೆಯೇ ಬಂದು ನಿಂತುಬಿಟ್ವು. • ಕಕ್ಕಾಬಿಕ್ಕಿಯಾದ್ವಿ. ನಮ್ಮೆದುರಿಗಿದ್ದ ನಿಸಾನ್ ಕಾರಿನಿಂದ ಅಮೆರಿಕನ್ ಒಬ್ಬ, ಹ್ಯಾಟನ್ನು ತೆಗೆದು, "ಮೇಡಂ! ಪ್ಲೀಸ್!" ಅಂತ ಕೈಬೀಸಿದಾಗ ಅರ್ಥವಾಯ್ತು – ನಾವು ಕ್ರಾಸ್ ಮಾಡೋಕೇ ಈ ಕಾರುಗಳು ಕಾಯ್ತಾ ಇದ್ವು ಅಂತ! ನೀವು ರಸ್ತೆ ಬದಿಯಲ್ಲಿ ಒಂದ್ನಿಮಿಷ ನಿಂತ್ರೂ ಸರಿ, ಜೆಟ್ ಸ್ಪೀಡಿನಲ್ಲಿ ಬರ್ತಾ ಇರೋ ಕಾರುಗಳೆಲ್ಲ ನಿಂತು, ನೀವು ದಾಟುವುದನ್ನೇ ಕಾಯುತ್ವೆ! ಪಾದಚಾರಿಗಳ ಕೂದಲು ಕೊಂಕಿದರೂ ಅವರ ಗತಿ ಅಧೋಗತಿ! ಯದ್ವಾತದ್ವಾ Fine ಹೇರಿ, ಲೈಸನ್ಸ್ ಕಿತ್ತುಕೋತಾರೆ! ನಮ್ಮ ಸೌತ್ ಎಂಡ್ ಸರ್ಕಲ್‌ನಲ್ಲಿ ಒಂದೈದು ನಿಮಿಷ ಪೋಲೀಸಿನವ ಇಲ್ದಿದ್ರೆ, ಕ್ರಾಸ್ ಮಾಡುವವರ ಪಾಡು ನಾಯಿ ಪಾಡೇ!

ಪಾರ್ಕಿಂಗ್ ಇಲ್ಲದ ಕಡೆ ಪಾರ್ಕ್ ಮಾಡಿದ್ರೆ, Over park ಮಾಡಿದ್ರೆ, ಯಾವ ಮುಲಾಜೂ ಇಲ್ದೆ, ಟಿಕೀಟು ಕೊಡ್ತಾರೆ, ತಪ್ಪು ಮಾಡಿದವ, ಚಿಕ್ಕಪ್ಪನ ಮಗನಾದ್ರೂ ಸಹ! ನಮ್ಮ M. G. ರೋಡಿನಲ್ಲಿ No parking ಅಂತ ಮುಖದ ಮೇಲೆ ಹೊಡೆಯೋ ಹಾಗೆ ಬೋರ್ಡುಗಳಿದ್ರೂ, ಅವುಗಳ ಮುಂದೆಯೇ ರಾಜಾರೋಷವಾಗಿ ಸಾಲುಸಾಲಾಗಿ ಕಾರುಗಳನ್ನ ನಿಲ್ಸಿರ್ತಾರೆ! ಹೇಳೋರಿಲ್ಲ, ಕೇಳೋರಿಲ್ಲ! ಹುಟ್ಟು ಗುಣ ಸುಟ್ರೂ ಹೋಗದು – ಅಲ್ವೆ?

"ಸರಿ, ಸರಿ! ಅಮೆರಿಕಾದಲ್ಲಿ ಡಾಲರ್ ಕೊಳೀತಾ ಇದೆ. ಅವರು ಮೊಸೈಕ್ ತರಾನೇ ರಸ್ತೆ ಮಾಡಬಹುದು. ಬೇಕಾದ್ರೆ ದಿನಾ ಅವನ್ನ ಪಾಲೀಷೂ ಮಾಡ್ಬಹುದು. ಇಂಡಿಯಾನ ಅಮೆರಿಕಾಗೆ ಹೋಲಿಸೋಕಾಗುತ್ಯೆ?" ಅಂತ ಮೂಗು ಮುರೀಬೇಡಿ! ಒಪ್ಪಿದೆ. ನಮ್ಹತ್ರ ದುಡ್ಡಿಲ್ಲ. ಆದರೆ ಒಂದು ಸಹಜ ಶುಚಿಯ ಮನೋಧರ್ಮ ಬೇಡ್ವೆ? ಅದಕ್ಕೇನು ಕಾಸು ಖರ್ಚು ಮಾಡಬೇಕಾಗಿದ್ಯೆ?

ಅಮೆರಿಕದ ರಸ್ತೆಗಳಲ್ಲಿ ಹಲವು ಅಡಿಗಳಿಗೊಮ್ಮೆ ದೊಡ್ಡ ದೊಡ್ಡ ಕಸದ ತೊಟ್ಟಿಗಳು 'Use me' ಅಂತ ಹಣೆಯ ಮೇಲೆ ಬರೆಸ್ಕೊಂಡು ನಿಂತಿರುತ್ವೆ. ನಂಬಿರಿ, ಎಲ್ಲರೂ ಅದನ್ನು ಯೂಸ್ ಮಾಡ್ತಾರೆ. ಇಲ್ಲದಿದ್ರೆ ಭಯಂಕರ Fine. Highways ನಲ್ಲೆಲ್ಲಾ "$ 1,000 for littering" ಅಂತ ನೂರಾರು ಫಲಕಗಳು.

ಮೊನ್ನೆ 4ನೆಯ ಬ್ಲಾಕಿನಲ್ಲಿ ನಮ್ಮ ಮುಂದೆಯೇ Full suitನಲ್ಲಿದ್ದ ಒಬ್ಬ 'ಗಣ್ಯರು' ತಿನ್ತಾ ಇದ್ದ ರಸಬಾಳೆ ಹಣ್ಣನ್ನ ಮುಗಿಸಿ, ಸಿಪ್ಪೇನ ರಸ್ತೆಯ ಮೂಲೆಯಲ್ಲಿದ್ದ ಕಸದ ತೊಟ್ಟಿಗೆ- - - - ಹಾಕಲಿಲ್ಲ. ಅಲ್ಲೇ ಎಸೆದು ಬಾಯೊರಸಿಕೊಂಡು ಹೋದರು. ಹಿಂದೆ ಹೋಗ್ತಾ ಇದ್ದ ನಾನು, ನಮ್ಮವರು ಎಚ್ಚರಿಸದಿದ್ರೆ—ಸಿಪ್ಪೇನ ತುಳಿದು, ಮುಗ್ಗರಿಸಿ ಬಿದ್ದು, ಮುಂದಿನ ಮೂರು ಪಲ್ಲು ಮುರ್ಕ್ಕೋತಾ ಇದ್ದೆ.

ರಸ್ತೆಯುದ್ದಕ್ಕೂ ಉಗಿಯೋದು, ಕಾಗದ, ಕಚಡಾ, ಕಡಲೆಕಾಯಿ ಸಿಪ್ಪೆ, ಬಾಳೆ ಹಣ್ಣಿನ ಸಿಪ್ಪೆ ಎಸೆಯೋದು, ನಮ್ಮ ಜನರ ದಿನಂಪ್ರತಿ ದುರಭ್ಯಾಸಗಳು. ಮರೆತು, ಸಿಗರೇಟ್ ಪ್ಯಾಕನ್ನು ರಸ್ತೆಯ ಬದಿಗೆ ಎಸೆದವನ ಮುಂದೆ ಧಿಡೀರನೆ ಪೋಲೀಸಿನವ ಪ್ರತ್ಯಕ್ಷನಾಗಿ, 5 ಡಾಲರ್ ಜುಲ್ಮಾನೆ ತೀಡಿದ್ದನ್ನ, ಸಿಂಗಪೂರಿನಲ್ಲಿ ಕಣ್ಣಾರೆ ನೋಡಿದೆವು. Tax ಅನ್ನೋ ಹೆಸರಿನಲ್ಲಿ, ನಾನಾ ವಿಧದಲ್ಲಿ ನಮ್ಮ ಹತ್ರ ಕಾಸು ಕಿತ್ಕೊಳ್ತಾ ಇದೆಯಲ್ಲ ಸರ್ಕಾರ? ರಸ್ತೆಗಳನ್ನು ಗಲೀಜು ಮಾಡುವವರಿಗೆ ನಿರ್ದಾಕ್ಷಿಣ್ಯವಾಗಿ Fine ಹಾಕಲಿ. ತೆಪ್ಪಗೆ Tax ಕೊಡೋರು, ತೆಪ್ಪಗೆ Fineಗಳನ್ನೂ ಕೊಡ್ತಾರೆ. ನಮ್ಮ ರಸ್ತೆಗಳೂ ಕ್ಲೀನಾಗಿರತ್ವೆ. ರಸ್ತೆಯಂಚುಗಳನ್ನ ತಮ್ಮ ಮನೆ ಲಟ್ರೀನ್ ಅಂತ

ತಿಳಿದಿದಾರಲ್ಲ ಎಷ್ಟೋ ಜನ, ಅಂಥವರನ್ನ ಹಿಡಿದು ನಾಲ್ಕು ದಿನ ಜೈಲಿನಲಿಟ್ಟರೆ ಖಂಡಿತ ತಪ್ಪೇನಿಲ್ಲ.

ನಮ್ಮ ರಸ್ತೆಗಳು ಶುಚಿಯಾಗಿ, ಸುಂದರವಾಗಿರೋದಕ್ಕೆ ಸರ್ಕಾರದೊಂದಿಗೆ ನಾವೂ ಸಹಕರಿಸಿ, ನಮ್ಮ ಅಳಿಲು ಸೇವೆ ನೀಡಿದರೆ, ನಮ್ಮ ರೋಡುಗಳನ್ನ ನೋಡಿ ನಮಗೆ ರೋಮಾಂಚನವಾಗ್ದೇ ಇದ್ರೂ—ರೋದಿಸದೇ ಇರೋಕಾದ್ರೂ ಸಾಧ್ಯವಾಗ ಬಹುದಲ್ವೆ ?



ಅಪರಂಜಿ ಜಾಹೀರಾತು ದರಗಳು

ಪೂರ್ಣ ಪುಟ (Full Page)–	ರೂ. 800/-	ಮೂರು ಸಂಚಿಕೆಗಳಲ್ಲಿ ಸತತ
ಅರ್ಧ ಪುಟ (Half Page)–	ರೂ. 400/-	
ಕಾಲು ಪುಟ (Quarter Page)–	ರೂ. 250/-	

ಜಾಹೀರಾತುಗಳನ್ನು, ಅವುಗಳ ವರ್ಗಕ್ಕೆ ತಕ್ಕ ಚೆಕ್ಕುಗಳೊಡನೆ ಕೆಳಗಿನ ವಿಳಾಸಕ್ಕೆ ಕಳುಹಿಸಿ.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ.
ಮಲ್ಲೇಶ್ವರಂ ಬೆಂಗಳೂರು–560 003

ವಿ.ಸೂ:– ಚೆಕ್ಕುಗಳನ್ನು ಅಪರಂಜಿ ಹೆಸರಿಗೆ ನಮೂದಿಸಬಹುದು

REGISTERED No. BGW-180

Printed by V R NATH for the Publisher M SHIVA KUMAR, Published and owned by M SHIVA KUMAR, 36, 6th Main Road, Malleswaram, Bangalore-560 003 Printed at IMPRESSIONS, 404, Sampige Road, Malleswaram, Bangalore-560 003 Editor M SHIVA KUMAR